
29

ಪಂಚಮ

ಸಂಪುಟ 10
ಸಂಚಿಕೆ 19-20
ಅಕ್ಟೋಬರ್-1986
ಬೆಲೆ 1 ರೂ.

ವೆಂಕಟಸ್ವಾಮಿ ವರದಿ, ಮೀಸಲಾತಿ ಪರಿಕಲ್ಪನೆ
ಒಂದು ಆಲೋಚನೆ



ಮೀಸಲಾತಿ ಯಾರಿಗೆ ಬೇಕು ? ಇದು ಜಾತಿ ಆಧಾರವಾಗಿರಬೇಕೆ ? ಅಥವಾ ಕುಟುಂಬದ ಆದಾಯ ಆಧಾರಿತವಾಗಿರಬೇಕೆ ? ಎಂಬುದನ್ನು ವಿವರವಾಗಿ ವಿಶ್ಲೇಷಿಸುವುದರ ಮೂಲಕ, ಮೀಸಲಾತಿಯ ಪರಿಕಲ್ಪನೆ ಬಗ್ಗೆ ಸ್ಪಷ್ಟ ತಿಳುವಳಿಕೆ ಪಡೆಯೋಣ. ಈ ಚರ್ಚೆಗೆ ನೂರುವರ್ಷಗಳಿಗೂ ಮೇಲ್ಪಟ್ಟ ಇತಿಹಾಸ ಇದೆ. ಅದೇನೇ ಇದ್ದರೂ ಭಾರತದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಚಲನೆಗೆ ಜಾತಿ ಬಹು ಮುಖ್ಯ ಪಾತ್ರ ವಹಿಸುತ್ತದೆ - ಎಂಬುದನ್ನು ಈ ದೇಶದ ಮಹಾನ್ ಚಿಂತಕರಾದಂತ ಜ್ಯೋತಿಭಾಫುಲೆ, ಅಂಬೇಡ್ಕರ್, ಇ. ವಿ. ರಾಮಸ್ವಾಮಿನಾಯ್ಕರ್, ನಾರಾಯಣಗುರು ಹಾಗೂ ಪ್ರಬಲ ಸಮಾಜವಾದಿಯಾಗಿದ್ದ ಡಾ॥ ಲೋಹಿಯಾರವರು ವಿಶ್ಲೇಷಿಸಿದ್ದಾರೆ. 'ಜಾತಿ' ಕಾರಣದಿಂದಲೇ ತಮ್ಮ ವ್ಯಕ್ತಿತ್ವವನ್ನು ವಿಕಾಸಪಡಿಸಿಕೊಳ್ಳಲಾರದಂತಹ, ಜಾತಿಯ ಜನರಿಗೆ ಶಿಕ್ಷಣದಲ್ಲಿ, ಹುದ್ದೆಗಳಲ್ಲಿ, ಕೈಗಾರಿಕೆ ಹಾಗೂ ವ್ಯಾಪಾರದಲ್ಲಿ ಮೀಸಲಿರಿಸಬೇಕೆಂದು ವಾದ ಮಾಡಿದ್ದರು.

'ವೆಂಕಟಸ್ವಾಮಿ ಆಯೋಗ' ಮೂಲೆಗುಂಪಾದ ಬಗ್ಗೆ ನಮ್ಮೆಲ್ಲರ ಕಣ್ಣು ಮುಂದಿದೆ. ಬಲಿಷ್ಠ ಜಾತಿಗಳ ತೋಳ್ಬಲ, ಅಕ್ಷರ ಸಾಮ್ರಾಜ್ಯಶಾಹಿ ಜಾತಿಗಳ ಚಾಣಾಕ್ಷ ರಾಜನೀತಿ, ಗರಿಗಟ್ಟುತ್ತಿದ್ದ ಹಿಂದುಳಿದ ವರ್ಗಗಳ ಚಳವಳಿಯನ್ನು ಐತಿಹಾಸಿಕವಾಗಿ ಬಗ್ಗುಬಡಿದ ದುರಂತ ಇದು.

ಈ ಹಿನ್ನೆಲೆಯಲ್ಲಿ ಮೀಸಲಾತಿ ಪರಿಕಲ್ಪನೆ ಕುರಿತು ಹ. ಸೋಮಶೇಖರ್ ಅವರ ಬರಹ ಇದು.

—ಸಂ.

ಡಾ॥ ಲೋಹಿಯಾರವರಂತೂ ಇಂತಹ "ನತದೃಷ್ಟ ಜಾತಿಗಳಿಗೆ" ಶೇ 80 ರಷ್ಟು ಮೀಸಲಿರಿಸಬೇಕೆಂಬ ಚಿಂತನೆಯನ್ನು ಹುಟ್ಟು ಹಾಕಿದರು. ಭಾರತದ ಸಮಾಜದಲ್ಲಿ ಶೋಷಣೆ ಜಾತಿ ರೂಪದಲ್ಲಿದೆ ಎಂಬುದನ್ನೂ ಲೋಹಿಯಾ ಅರ್ಥೈಸಿ ವಿಶ್ಲೇಷಿಸಿದ್ದರು. ಆದರೆ ಮಾರ್ಕ್ಸ್ ವಿಶ್ವದ ಯಾವುದೇ ಸಮಾಜದಲ್ಲಿನ ಶೋಷಣೆಗೆ ವರ್ಗವೇ ಕಾರಣ ಎಂದು ವಿಶ್ಲೇಷಿಸಿದ್ದರು. ಶೋಷಣೆಯ ಬಗ್ಗೆ ವ್ಯಾಖ್ಯಾನಿಸುವಲ್ಲಿ ಲೋಹಿಯಾ ಮಾರ್ಕ್ಸ್‌ಗಿಂತ ಪ್ರತ್ಯೇಕವಾಗಿ ನಿಲ್ಲುವುದು ಇದೇ ನೆಲೆಯಲ್ಲೇ. ಆದ್ದರಿಂದ ಭಾರತದಲ್ಲಿ ಎಲ್ಲ ರೀತಿಯ ಅಸಮಾನತೆ, ಶೋಷಣೆಗೆ ಜಾತಿಪದ್ಧತಿಯೇ ಬಹು ಮುಖ್ಯ ಕಾರಣ ಎಂಬುದನ್ನು ಪ್ರಜ್ಞಾವಂತರಾದಂತವರು ಯಾರೂ ಅಲ್ಲಗಳೆಯುವುದಿಲ್ಲ. ಆದ್ದರಿಂದ ಇಂತಹ ಜಾತಿ ಪದ್ಧತಿಯನ್ನು ನಾಶಮಾಡದೆ ಭಾರತೀಯ ಸಮಾಜದಲ್ಲಿ ಸಮಾನತೆ ತರಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಲೋಹಿಯಾರವರು ತಿಳಿಸಿದ್ದರು.

→ 12

ಕೊಡುಗೆ : ದೇವನೂರ ಮಹಾದೇವ ದಿನಾಂಕ: 23.06.06

ಪತ್ರಗಳು

ಕನಸುಗಳನ್ನು ನನಸಾಗಿಸಲು

ಗೆಳೆಯ,

'ಅಕ್ಷರಗಳ ಬೆಳಕಿನತ್ತ ಸಹಸ್ರ ಕಾಲುಗಳ ಮೆರವಣಿಗೆ ಹೊತ್ತು ತಂದ 'ಪಂಚಮ' ಮುಂದ ನೀಡಿತು. 'ಮತ್ತೊಮ್ಮೆ ಯೋಚನೆಗೆ ಹಚ್ಚಿತು' ಎಂದೆಲ್ಲ ಬರೆದರೆ ಅದು ತುಂಬ ಫಾರ್ಮಾಲಿಟಿಕಲ್ ಆಗುವುದೇನೋ ಎಂಬ ಭಯವಿದೆ ! ಆದರೂ ನನಗೆ ಹಳೆಯದೆಲ್ಲ ನೆನಪಿಗೆ ಬಂದು ಮತ್ತೊಮ್ಮೆ ಅಂತಹ ವಾತಾವರಣ ಯಾವಾಗ ಸೃಷ್ಟಿಯಾಗುವುದೋ ಅಂತನ್ನುವ ಕಾತರ- ಹಾಗಾಗುವಲ್ಲಿ ಪಂಚಮ ಸ್ವಲ್ಪವಾದರೂ ಸಹಾಯವಾಗಬಹುದೆನ್ನಿಸಿದ್ದರಿಂದ ಈ ಅನಿಸಿಕೆಯ ಪತ್ರ.

ನನ್ನ ಅಭಿಪ್ರಾಯಗಳು 'ದಾರಿ ಮತ್ತು ಗುರಿ' ಯಲ್ಲೇ ವ್ಯಕ್ತಗೊಂಡುಬಿಟ್ಟಿವೆಯಲ್ಲ. ಹಾಗೆಯೇ 'ಕಳೆದು ಹೋದ ಗೆಳೆಯರ'ನ್ನು ಮತ್ತೆ ಹುಡುಕಿ, ಹೆಜ್ಜೆಗಳೊಂದಿಗೆ ಅವರ ಹೆಜ್ಜೆ ಸೇರಿಸಿಕೊಂಡು ಕತ್ತಲೆಯ ಓಣಿ ಓಣಿಗಳನ್ನು ಹುಡುಕಿ ಬೆಳಕು ಬೀರುತ್ತ ನಡೆಯುವಲ್ಲಿ ಬೆಳಕಿನ ಚೂರೇ ಕಂಡಿರದ ಜನಗಳ ಮುಖದ ಮೇಲೆ ಆಗ ಮೂಡುವ ಸಂತೃಪ್ತಿಯ ನೋಡಿ ಸಂತಸದುಸಿರು ಬಿಡುವಲ್ಲಿ ಎಷ್ಟು ಸೊಗಸಿದೆ ಅಲ್ಲವೆ ಗೆಳೆಯ ?

ನಿಜ, ಕ್ರಾಂತಿಯ ಬೀಜ ಮೊಳಕೆಯೊಡೆದು ಚಿಗುರಿ-ಚಿಂಗುಲಾಬಿ ಬಿಡುವ ಕಾಲವಿನ್ನೂ ಧೂರವಿರಬಹುದು. ಕ್ಷಿತಿಜ ಆರಸುತ್ತ ; ಸಿಗುವುದೆಂಬ ನಂಬಿಕೆಯಿಟ್ಟು ನಡೆಯುವುದಷ್ಟೇ ನಮ್ಮ ಕೆಲಸವೆಂಬ ಅಭಿಪ್ರಾಯ ನನ್ನದು.

ನನ್ನ ಕಣ್ಣಳು ಮತ್ತೆ ಆ ಹೋರಾಟದ ಹುಮ್ಮಸ್ಸನ್ನು ಕಾಣಲು ಕಾತರಿಸುತ್ತಿವೆ. ಕಿವಿಗಳು ಆ ಹಾಡುಗಳ ಇಂಪನ್ನು ಕೇಳಲು ಬಯಸುತ್ತಿವೆ. ಬಹಳ ಬೇಗ ಮತ್ತೆ ಸೇರೋಣ - ಕನಸು ತುಂಬಿದ ಜನರನ್ನು ಮಾಡೋಣ.

ಬರಲೇ ?
ರಾಮಚಂದ್ರ
ಸುರಪುರ

ಕೋಳಿಮರಿ ತಂದ ಸಾವು

ಮಟ ಮಟ ಮಧ್ಯಾಹ್ನ. ಬಿಸಿಲು ಮುಟ್ಟಿನೋಡಿಕೊಳ್ಳುವಂತಿತ್ತು. ಬೇಲಿಯ ನೆರಳಲ್ಲಿ ಹೂಮರಿಗಳೊಡನೆ ತಾಯಿ ಕೋಳಿ ಆಡುತ್ತಿತ್ತು. ವರ್ತುಲವರ್ತುಲಾಕಾರವಾಗಿ ಸುತ್ತುತ್ತಿದ್ದ ಹದ್ದೊಂದು ಇದನ್ನು ಗಮನಿಸುತ್ತಿತ್ತು. ಗಕ್ಕಂತ ಮರಿಕೋಳಿಯ ಮೇಲೆ ಎರಗಿ ಮರಿಯನ್ನು ಕಚ್ಚಿಕೊಂಡು ಹಾರಿತು. ಒಮ್ಮೆಲೆ ಕೋಳಿ ಕೌಕುಹಾಕಿದವು. ಭಯದಿಂದ ಮರಿಗಳು ಸಿಕ್ಕಿದಲ್ಲಿ ಅಡಗಿಕೊಂಡವು. ಮನೆಯ ಸೂರಿನಡಿಯಲ್ಲಿ ಮಲಗಿದ್ದ ಈಡಿಗರ ವೆಂಕಟೇಶಪ್ಪ ಹೊರ ಓಡಿಬಂದ. ಹದ್ದು ಕಾಣಲಿಲ್ಲ. ಹಾರಿಹೋಗಿತ್ತು. ಅಬ್ಬರಿಸಿದ. ಕೂಗಿದ. ಕೆಮ್ಮಿದ. ಕೋಳಿ ಮರಿಗಳನ್ನು ನೋಡಿದ. ಒಂದು ಮರಿ ಕಾಣಲಿಲ್ಲ. ಸುತ್ತಮುತ್ತ ನೋಡಿದ: ಕಾಣಲಿಲ್ಲ ತಾಯಿಕೋಳಿ ಕೆಲಕಾಲ ಬಿಕ್ಕಳಿಸಿ ಸುಮ್ಮನಾಯಿತು:

ಮನೆಯ ಮುಂದೆ ಏನನ್ನೋ ಗುನುಗುತ್ತಿದ್ದ ಪ್ರಾಯದ ದಲಿತ ಮುನಿಯಪ್ಪನಿಗೆ ಕೋಳಿಮರಿಯ ಕೂಗು ಕೇಳಿಸಿತು. ಕತ್ತೆತ್ತಿ ನೋಡಿದ. ಹದ್ದು ಮರಿಯನ್ನು ಹಿಡಕೊಂಡು ಇವನ ತಲೆಯ ನೇರದಲ್ಲಿ ಹಾರುತ್ತಿದೆ. ಹಚಹಚ ಎಂದು ಅಬ್ಬರಿಸಿ, ಹದ್ದನ್ನು ಹಿಂಬಾಲಿಸಿದ ಇವನ ಕೂಗಾಟಕ್ಕೆ, ಹದ್ದು ಮರಿಯನ್ನುಬೀಳಿಸಿ ಪರಾರಿಯಾಯಿತು. ಮುನಿಯಪ್ಪ ಅದನ್ನು ಜೋಪಾನವಾಗಿ ತಂದು ನೀರು ಕುಡಿಸಿದ. ಅಂಗೈಯಲ್ಲಿಟ್ಟುಕೊಂಡು ಪೋಷಿಸಿದ. ಆ ಮರಿ ನರಳುತ್ತಾ, ನರಳುತ್ತಾ, ಎರಡನೆಯ ದಿನ ಸತ್ತು ಹೋಯಿತು.

ಹಾಗೆ ಆ ಮರಿ ನರಳುತ್ತಾ, ನರಳುತ್ತಾ ಇರುವಾಗ, 'ಇದು ಎಲ್ಲಿಯದು ಮರಿ' ಮುನಿಯಪ್ಪನ ಮನೆ ದಾರಿಯಲ್ಲಿ ಬಂದ ಈಡಿಗರ ವೆಂಕಟೇಶ ಕೇಳಿದ. ಮುನಿಯಪ್ಪ ನಿಜ ಕಥೆ ಹೇಳಿದ, ವೆಂಕಟೇಶ ಒಪ್ಪಲಿಲ್ಲ. ಬೆದರಿಸಿದ "ಕೋಳಿಮರಿ ಕದ್ದಿದ್ದೀಯಾ" ಎಂದು. ಆ ಮಾರನೆಯ ದಿನ ಊರ ಪಂಚಾಯ್ತಿ ಸೇರಿಸಿದ. ಮುನಿಯಪ್ಪ, 'ಸ್ವಾಮಿ ನಾನು ಕೋಳಿಮರಿ ಕದಿಯಲಿಲ್ಲ. ಹದ್ದು ಹಾರಿಸಿಕೊಂಡು ಹೋಗುವಾಗ ಬಿಡಿಸಿದೆ. ನೀವು ಪಂಚಾಯ್ತಿ ಮಾಡಿಸಬೇಡಿ. ಬೇಕಾದರೆ ಕೋಳಿಮರಿ ಚಾರ್ಜು ಕೊಡುತ್ತೇನೆ.' ಎಂದಿದ್ದಕ್ಕೆ ವೆಂಕಟೇಶಪ್ಪ ಒಪ್ಪಲಿಲ್ಲ.

ಸರಿ. ಪಂಚಾಯ್ತಿ ಸುರುವಾಯಿತು. ವಿಚಾರಣೆ–ವಿಚಾರಣೆ. ಏನಾಯಿತೋ, ಈ ಮುನಿಯಪ್ಪನಿಗೆ 300ರೂ. ದಂಡ ಹಾಕಿದರು. ಕೋಳಿಮರಿ ಕದ್ದಿದ್ದಕ್ಕೆ ಈತ ಬೇಡಿಕೊಂಡ, ಅತ್ತುಕರೆದ: ನಾನಲ್ಲ ಅಂದ, ಹಿರಿಯ ಮಗನ ನೆರವಿಗೆ ಬಂದ ತಂದೆತಾಯಿಗಳೂ ಬೇಡಿಕೊಂಡರು: ಬಡವರೆಂದರು. ಪಂಚಾಯ್ತಿಯವರಿಗೆ ಮನಕರಗಿತು. ದಂಡ 300ರೂನಿಂದ 30 ರೂ.ಗೆ ಇಳಿಯಿತು. ಇದು ನಡೆದುದು ಸೆಪ್ಟೆಂಬರ್ 17ರ ರಾತ್ರಿ.

ಆ ಮಾರನೆಯ ದಿನ 18ರಂದು, ಊರ ಮಾಪಿನ ಮರದಲ್ಲಿ ಈ ಮುನಿಯಪ್ಪನ ದೇಹ ನೇತಾಡುತ್ತಿತ್ತು. ಕೋಳಿಮರಿ ಕದಿಯದಿದ್ದರೂ ಕಳ್ಳ ಎಂಬ ಹಣೆಪಟ್ಟಿಯನ್ನು ಇಟ್ಟಿದ್ದು, ಯಃಕಶ್ಚಿತ್ ಕೋಳಿ ಕದ್ದ ಅನ್ನುವ ಅವಮಾನ. ಮುನಿಯಪ್ಪನಿಗೆ ಈ ಜೀವ ಬೇಡ ಅನಿಸಿತು.

ಇದು ಕತೆಯಲ್ಲ. 18-9-1986 ರಂದು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ತಿರುಮಲಹಟ್ಟಿ ಗ್ರಾಮದಲ್ಲಿ ನಡೆದ ಸತ್ಯಘಟನೆ. ತಿರುಮಲಹಟ್ಟಿಯಲ್ಲಿ ನೂರೈವತ್ತು ಮನೆಗಳಿದ್ದು ಅವುಗಳಲ್ಲಿ ಗೌಡರದೇ ಪ್ರಾಬಲ್ಯ. ಇನ್ನೂ ಇವರ ಗತ್ತು, ಇತ್ಯಾದಿ ನಿಮ್ಮ ಊಹೆಗೆ ಬಿಟ್ಟಿದ್ದು.

ಮುಂದೆ ದ.ಸಂ.ಸ. ಊರಿಗೆ ಭೇಟಿ ಇತ್ತು ಪಂಚಾಯ್ತಿದಾರರಿಗೆ ಮುಖದಲ್ಲಿ ನೀರಿಳಿಸಿ, ಪೊಲೀಸರಿಗೆ ಮನವರಿಕೆ ಮಾಡಿ ಈಗ ಪಂಚಾಯ್ತಿ ಕಟ್ಟೆಯ ಮೇಲೆ ಕೇಸು ಹಾಕಿದ್ದಾರೆ.

● ಹೆಬ್ಬಾಲೆ ಲಿಂಗರಾಜ.

ಪಂಚಮ ಓದಿರಿ, ಓದಿಸಿರಿ

ಹೋಬಳಿಗೊಂದು ವಸತಿಶಾಲೆ

ಒಂದು ಅರ್ಥಪೂರ್ಣ ಮಾತುಕತೆ

ದ. ಸಂ. ಸ. ಮುಂದಿಸಿದ್ದ ರೂಪುರೇಷೆಯ ಸಂಕ್ಷಿಪ್ತ ವಿವರ

ಹೆಸರು :	ಅಂಬೇಡ್ಕರ ವಸತಿ ವಿದ್ಯಾಲಯ
ಅವಕಾಶ :	ಅ) 1ರಿಂದ 12 ನೇ ತರಗತಿವರೆಗೆ ಆ) ತಲಾ ಒಂದು ತರಗತಿಗೆ 20 ವಿದ್ಯಾರ್ಥಿಗಳಂತೆ 20 – 10 ತರಗತಿ ; 200 ಸಂಖ್ಯೆ.
ಶಾಲೆ ಆವರಣ :	ಕನಿಷ್ಠ 1 ಎಕರೆ ತಾಲೂಕಿನ ಕೇಂದ್ರದಿಂದ ದೂರವಿರಲಿ
ವಿದ್ಯಾರ್ಥಿ ಆಯ್ಕೆ :	ಅ) ಪರಿಶಿಷ್ಟರು ಶೇಕಡ 75, ಇತರರು 25 ಜಿಲ್ಲೆಗೊಂದು ಹೆಣ್ಣು ಮಕ್ಕಳ ಶಾಲೆ ಆ) ದೇವದಾಸಿ ಪದ್ಧತಿ ಹೆಚ್ಚಾಗಿರುವೆಡೆ ಬಾಲಿಕೆಯರ ವಸತಿ ಶಾಲೆಗೆ ಆದ್ಯತೆ ಇ) ಅವಿದ್ಯಾವಂತರ ಮಕ್ಕಳಿಗೆ ಆದ್ಯತೆ
ಉಪಾಧ್ಯಾಯರು :	ಮುಖ್ಯಸ್ಥರಿಗೆ ಶಾಲೆಯ ಆವರಣದಲ್ಲೇ ಊಟವಸತಿ ಅನುಕೂಲ. ಉಳಿದ ಉಪಾಧ್ಯಾಯರಿಗೆಲ್ಲಾ ಮಧ್ಯಾಹ್ನದ ಊಟಕ್ಕೆ ಶಾಲೆಯಲ್ಲಿ ಅವಕಾಶ
ಪಠ್ಯಕ್ರಮ :	ತನ್ನದೇ ಪಠ್ಯಕ್ರಮ, ಪರೀಕ್ಷಾ ಪದ್ಧತಿಗೆ ಅವಕಾಶ ಗ್ರಂಥಾಲಯ, ಕ್ರೀಡೆಗೆ ಶಾಲಾ ಆವರಣದಲ್ಲೇ ಸೌಲಭ್ಯ.
ಆಡಳಿತ :	ಮಕ್ಕಳ ತಂದೆತಾಯಿಗಳು ಉಪಾಧ್ಯಾಯರು ಭಾಗವಹಿಸುವಂತಿರಬೇಕು ಸ್ವಾಯತ್ತತೆ ಇರಬೇಕು – ವಿಶ್ವವಿದ್ಯಾಲಯ ಮಾದರಿಯಲ್ಲಿ ಖಚಿತ ಆಡಳಿತ ಸ್ವರೂಪ ರೂಪಿಸಲು – ಶ್ರೀ ಶಿವರಾಮ ಕಾರಂತ, ಶ್ರೀ ಹೆಚ್. ನರಸಿಂಹಯ್ಯ, ಶ್ರೀ ರಾಗಿ ಲಕ್ಷ್ಮಣಯ್ಯ, ಶ್ರೀ ಹೆಚ್. ಗಂಗಾಧರಯ್ಯ, ಶ್ರೀ ಭೂತಯ್ಯ, ಶ್ರೀ ಕೆ. ನಾರಾಯಣಸ್ವಾಮಿ ಗುಡಿಬಂಡೆ, ಬಿ. ಕೃಷ್ಣಪ್ಪ, ದೇವನೂರು ಮಹಾದೇವ ಮುಂತಾದವರ ಮಾರ್ಗದರ್ಶನ ಪಡೆಯಲು ಸಲಹೆ.

ಸೆಪ್ಟೆಂಬರ್ ತಿಂಗಳ 25ರ ಬುಧವಾರ ಬೆಳಿಗ್ಗೆ 11 ಗಂಟೆಗೆ ವಿಧಾನಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಒಂದು ಉಪಯುಕ್ತ ಮಾತುಕತೆ ನಡೆಯಿತು. ಮಾಮೂಲಿ ರಾಜಕೀಯ ಮಾತುಕತೆಗಳಿಂದ ಜಡ್ಡು ಹಿಡಿದಿದ್ದ ವಿಧಾನಸೌಧದಲ್ಲಿ ಇದೊಂದು ಹೊಸ ರೀತಿಯ ಮಾತುಕತೆ. ಅಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಗೃಹಸಚಿವ ಬಿ. ರಾಚಯ್ಯ, ಅವರೊಡನೆ ದ. ಸಂ. ಸ. ಕಾರ್ಯಕಾರಿ ಸಮಿತಿಯ ನಿಯೋಗ ಮಾತುಕತೆ ನಡೆಸಿತು.

ನಿಯೋಗದಲ್ಲಿ ರಾಜ್ಯ ಸಂಚಾಲಕ ಸಿ. ಎಂ. ಮುನಿಯಪ್ಪ, ರಾಜ್ಯ ಸಂಘಟನಾ ಸಂಚಾಲಕ ಜಯಣ್ಣ, ರಾಜ್ಯ ಖಜಾಂಚಿ ರಂಗಸ್ವಾಮಿ ಬೆಲ್ಲದಮಡು, ಎಂ. ಡಿ. ಗಂಗಯ್ಯ, ಎನ್. ವೆಂಕಟೇಶ್, ಇದ್ದರು. ಮಾತುಕತೆಯನ್ನು ಮತ್ತಷ್ಟು ಅರ್ಥಪೂರ್ಣಗೊಳಿಸಲು ಮಾಜಿ ರಾಜ್ಯ ಸಂಚಾಲಕರಾದ ಬಿ. ಕೃಷ್ಣಪ್ಪ, ದೇವನೂರ ಮಹಾದೇವ ಹಾಗೂ ಹಿರಿಯ ಬರಹಗಾರರಾದ ಕೆ. ನಾರಾಯಣಸ್ವಾಮಿ ಅವರೂ ಹಾಜರಿದ್ದರು.

ಈ ಮಾತುಕತೆ - ದ. ಸಂ. ಸ. ದ 16 ತಿಂಗಳುಗಳ ನಿರಂತರ ಹೋರಾಟದ ಫಲ. 1985ರ ಏಪ್ರಿಲ್ 14 ರಂದು ದ. ಸಂ. ಸ. ಹೋಬಳಿಗೊಂದು ವಸತಿ ಶಾಲೆ ಒತ್ತಾಯಿಸಿ ಬೇಡಿಕೆ ಮುಂದಿಟ್ಟಿತ್ತು. ಅಂದಿನಿಂದ ಮೊನ್ನೆಯ ತನಕವೂ ಅದಕ್ಕಾಗಿ ನಿರಂತರ ಹೋರಾಡಿತ್ತು. ಮೊನ್ನೆಯ ಆಗಸ್ಟ್ 15 ರಂದು ಸರ್ಕಾರಕ್ಕೆ ಅಂತಿಮ ಎಚ್ಚರಿಕೆ ಕೊಡಲು ಮೆರವಣಿಗೆ ಏರ್ಪಡಿಸಿತ್ತು.

ಕೊನೆಗೂ ಸರ್ಕಾರ ಕಣ್ಣು ತೆರೆಯಿತು !

ಅದರ ಫಲವೇ 25ರ ಅಧಿಕೃತ ಮಾತುಕತೆ.

ಮಾತುಕತೆಯ ವೇಳೆ ದ. ಸಂ. ಸ ಒಂದು ರೂಪುರೇಷೆ ಸಿದ್ಧಪಡಿಸಿ ಮುಂಡಿಸಿತು. ಹೋಬಳಿಗೆಂದು ವಸತಿ ಶಾಲೆ ಒತ್ತಾಯಿಸಿರುವ ದ. ಸಂ. ಸ. ದ ಬೇಡಿಕೆಯನ್ನು ಸರ್ಕಾರ ಒಪ್ಪಿಕೊಂಡಿದೆ.

ಗೃಹ ಸಚಿವ ಬಿ. ರಾಚಯ್ಯ ಹಾಗೂ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಈ ಯೋಜನೆಗೆ ಸಮ್ಮತಿಸಿ ಮುಂದಿನ ವರ್ಷಾರಂಭದಿಂದಲೇ ಪ್ರಾರಂಭಿಸುವುದಾಗಿ ಭರವಸೆ ಇತ್ತರು. ಸಧ್ಯಕ್ಕೆ ಪ್ರಾಯೋಗಿಕವಾಗಿ ತಾಲೂಕಿಗೊಂದು ವಸತಿ ಶಾಲೆ ಪ್ರಾರಂಭಿಸುವುದಾಗಿ ಮುಂದೆ ಎಲ್ಲಾ ಹೋಬಳಿ ಕೇಂದ್ರಗಳಲ್ಲೂ ತೆರೆಯುವುದಾಗಿ ಒಪ್ಪಿಕೊಂಡಿದ್ದಾರೆ. ಈ ಕುರಿತು ಈಗಾಗಲೇ ಸಂಬಂಧ ಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚನೆಯನ್ನೂ ಕೊಟ್ಟಿದ್ದಾರೆ. ದ. ಸಂ. ಸ. ದ ಹೋರಾಟ ಕೊನೆಗೂ ಫಲಪ್ರದವಾಗಿ ಪರಿಣಮಿಸಿತು.

ದನಿ ಸತ್ತವರ ದನಿಯಾಗಲಿ

"ಜಾತಿ ವ್ಯವಸ್ಥೆಯ ವಾಮನ
ಕ್ರೂರ ತ್ರಿವಿಕ್ರಮ ಅವತಾರ ತಾಳಿ
ಶೂದ್ರಶಕ್ತಿಯನ್ನು
ಬಲಿತೆಗೆದುಕೊಳ್ಳುತ್ತಿರುವುದನ್ನು
ಪ್ರತಿಭಟಿಸಿ ಎಚ್ಚೆತ್ತು ನಿಂತ "ಪಂಚಮ"
ದನಿ ಸತ್ತವರ ದನಿಯಾಗಿ
ಮೊಳಗಲಿ"

● ಡಾ॥ ಭ. ನಾಗರಾಜ್ ಎಂ.ಬಿ.ಬಿ.ಎಸ್.,
ಗುರು ಚಿಕಿತ್ಸಾಲಯ ಮತ್ತು ಪ್ರಯೋಗ ಶಾಲೆ,
ಗುಂಡ್ಲುಪೇಟೆ–561 111.
(ಮೈಸೂರು ಜಿಲ್ಲೆ)

"ಪಂಚಮ ಪ್ರಕಾಶನ" ಒಂದು ಸ್ಪಷ್ಟನೆ.

ನಮ್ಮ ಕೆಲವು ಗೆಳೆಯರು "ಪಂಚಮ ಪ್ರಕಾಶನ"ದ ಲೆಕ್ಕಾಚಾರದ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನು ಹಬ್ಬಿಸತೊಡಗಿದ್ದಾರೆ. ಈ ಹಿಂದೆಯೇ 'ದ.ಸಂ.ಸ. ರಾಜ್ಯ ಸಮಿತಿಗೆ ಈ ಕುರಿತ ಲೆಕ್ಕಾಚಾರಗಳನ್ನು ಒಪ್ಪಿಸಲಾಗಿತ್ತು.

ಜೊತೆಗೆ ಈ ಆರೋಪಗಳಿಗೆ ಉತ್ತರಿಸಲೆಂದೇ ದ.ಸಂ.ಸ. ಹಾಗೂ ಪಂಚಮ ವ್ಯವಸ್ಥಾಪಕ ಮಂಡಲಿಯ ಸಭೆ ಕರೆಯಲಾಗಿತ್ತು.

ಆ ಸಭೆಗಳಿಗೂ ಅವರು ಹಾಜರಾಗಲಿಲ್ಲ. ಇಷ್ಟಾದ ನಂತರವೂ ಅವರ ಕೆಸರೆರಚುವ ಕಾಯಕ ನಿಲ್ಲದ್ದರಿಂದ ಇನ್ನೊಮ್ಮೆ ಮಾಜಿ ಸಂಪಾದಕ/ಪ್ರಕಾಶಕ ಗೋವಿಂದಯ್ಯ, ಮಾಜಿ ವ್ಯವಸ್ಥಾಪಕ ಸಂಪಾದಕ ದೇವನೂರ ಮಹಾದೇವ ಸ್ಪಷ್ಟನೆ ನೀಡಿದ್ದಾರೆ.

● ಸಂಪಾದಕ

ಅವರ ಆರೋಪಗಳ ಪಟ್ಟಿ ಈ ಕೆಳಗಿನಂತಿದೆ.

ಪ್ರತಿಗಳು	ಅಚ್ಚಿಸಿದ ಪ್ರತಿಗಳು	ತಲಾ ಬೆಲೆ	ಒಟ್ಟು ಬೆಲೆ
1) "ಮೀಸಲಾತಿ ಪುಸ್ತಕ"	10,000	10ರೂ.	1,00,000ರೂ.
2) ಹೋರಾಟದ ಹಾಡುಗಳು	50,000	5ರೂ.	50,000ರೂ.
3) ರೈತ – ದಲಿತ "ವಿಶೇಷಾಂಕ" 83	20,000	5ರೂ.	1,00,000ರೂ.
4) "ಮಹಾಚೈತ್ರ ನಾಟಕದಿಂದ" ಬಂದಹಣ?	50,000		50,000ರೂ.
5) ಪದೇಪದೇ ಸಂಗ್ರಹಿಸಿದ ಜಾಹೀರಾತು ಹಣ	2,00,000ರೂ.		2,00,000ರೂ.
6) ನಿರಂತರ ಚಂದಾ	82,000ರೂ.		82,000ರೂ.
7) ಸಾರಾಯಿ ಬಾಟ್ಲಿಂಗ್ ಗುತ್ತಿಗೇದಾರರಿಂದ ಪಂಚಮ ವಿಶೇಷಾಂಕಕ್ಕಾಗಿ ಪಡೆದ ಜಾಹಿರಾತು ಹಣ			1,00,000ರೂ.
			6,82,000ರೂ.

ನಮ್ಮ ಸಾಕಾರು ಗೆಳೆಯರು ಪಂಚಮ ಪ್ರಕಾಶನ ಸಂಸ್ಥೆಯ ಲೆಕ್ಕಾಚಾರದ ಬಗ್ಗೆ ಅನೇಕ ಕಡೆ ಗಬ್ಬು ಎಬ್ಬಿಸುತ್ತಿರುವ ಕಾರಣಕ್ಕಾಗಿ–ನಮ್ಮ ಓದುಗರ ಮುಂದೆ ನಿಜಾಂಶ ಇಡುತ್ತಿದ್ದೇವೆ. ದಿನಾಂಕ 15.12.85ರಂದುನಡೆದ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿ ಸದಸ್ಯರಿಗೆಲ್ಲ ವಿವರವಾದ ಲೆಕ್ಕಾಚಾರದ ಸ್ಟೆನ್ಸಿಲ್ ಪ್ರತಿಯನ್ನು ಒಪ್ಪಿಸಲಾಗಿದೆ. ಆದಾಗ್ಯೂ ಆ ಸಾಕಾರು ಜನವು–ಲೆಕ್ಕಾಚಾರ ನೀಡಿಲ್ಲ ಎಂಬ ಸುಳ್ಳು, ಮೀಟಿಂಗೆಸೇ ಕರೆದಿಲ್ಲ ಎಂಬ ಸುಳ್ಳು, ನಾವು ಕೈಗೆ ಸಿಗುತ್ತಿಲ್ಲ ಎಂಬ ಸುಳ್ಳು–ಹೀಗೆ ಅವರ ಆರೋಪಗಳ ಸುಳ್ಳುಗಳ ಸರಮಾಲೆಯೊಡನೆ ಅವರು ಹೂಸಿದರೂ ಸುಳ್ಳು, ಉಸಿರಾಡಿದರೂ ಸುಳ್ಳು ಹೇಳುತ್ತಾ ಭ್ರಮಾಧೀನರಾಗಿದ್ದಾರೆ. ಇಂಥವರಿಗೆ ನಿಜ ಬೇಕಾಗಿಲ್ಲ. ಯಾಕೆಂದರೆ ನಿದ್ರೆ ಮಾಡುತ್ತಿರುವವರನ್ನು ಎಬ್ಬಿಸಬಹುದು. ನಿದ್ರೆ ನಟಿಸುವವರನ್ನು ಎಬ್ಬಿಸುವುದು ಕಷ್ಟ. ಆದ್ದರಿಂದ, ಓದುಗರ ಮುಂದೆಯೇ ನೇರವಾಗಿ ಸ್ಪಷ್ಟನೆ ಇಡುತ್ತಿದ್ದೇವೆ.

ಈ ನಡುವೆ ಅನೇಕಾನೇಕ ಒಳಬಣ್ಣಗಳು ಹುತ್ತದಿಂದ ಹೊರಬರತೊಡಗಿವೆ. ಉದಾಹರಣೆಗೆ ಕೆಲ ದಲಿತರಲ್ಲಿನ ದಡ್ಡತನ ಅಥವಾ ಕೆಲ ದಲಿತರ ಹೊಟ್ಟೆಯು ನಾನಾ ನಿಮಿತ್ತವಾಗಿ ಹೊಟ್ಟೆ ಕಿಚ್ಚಿನ ಬಚ್ಚಲಾಗುವುದನ್ನೆಲ್ಲ. ಈ ವಾಸನೆಯನ್ನೇ ರಣಹದ್ದುಗಳಂತೆ ತಮ್ಮ ಒಳಸಹಜ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ ಪ್ರಗತಿಪರ ಮುಖವಾಡದ ಕೆಲವು ಸವರ್ಣೀಯರು ತಮ್ಮ ಅಂತರಂಗದ ಬಣ್ಣವನ್ನು ತಮ್ಮ ಶಕ್ತ್ಯಾನುಸಾರ ಪ್ರಕಟಿಸಿದ್ದಾರೆ.

ಈ ಎಲ್ಲವೂ ಸದ್ಯಕ್ಕೆ ವಿಷಾದನೀಯವಾದರೂ, ಇದೇ ಮುಂದೆ ಒಂದು ಸಂಘಟನೆಯ ವಿವೇಕ ಮತ್ತು ಧಾರಣಶಕ್ತಿ ವಿಕಸಿತವಾಗಲು ಇವೇ ಕಾರಣವಾಗುತ್ತವೆ ಎಂಬ ಸತ್ಯವು ಮುಂದೆ ಸಂಘಟನೆಯನ್ನು ಬಲಿಷ್ಠ ಮಾಡುತ್ತವೆ.

(ಶ್ರೀ ರಾಮದೇವ ರಾಕೆ ಮತ್ತು ಶ್ರೀ ಕೆ. ದೇವೇಗೌಡ ಅವರುಗಳು ನೀಡಿರುವ ಸ್ಪಷ್ಟನೆಗಳನ್ನು ಲಗತ್ತಿಸಲಾಗಿದೆ. ಗಮನಿಸಿರಿ)

○ 'ಮಹಾಚೈತ್ರ' ನಾಟಕದಿಂದ ಬಂದ ಹಣ 50,000 ಎಂಬ ಆರೋಪವಿದೆ. ಆದರೆ '13,210 ರೂ. ಮಾತ್ರ ಶೇಖರವಾಗಿ ಇದರಲ್ಲಿ ನಾಟಕ ಆಡಿಸುವ, ವ್ಯವಸ್ಥೆಗೆ 2,444ರೂ. ಖರ್ಚಾಗಿ 10,766 ರೂ. ಮಾತ್ರ ಉಳಿಯಿತು.

○ ಪಂಚಮಕ್ಕೆ ಪದೇ ಪದೇ ಜಾಹೀರಾತು ಪಡೆದ ಹಣ 2 ಲಕ್ಷ ಎಂಬ ಆರೋಪವಿದೆ. ಜಾಹೀರಾತುಗಳು ಪತ್ರಿಕೆಯಲ್ಲೇ ಪ್ರಕಟವಾಗಿರುವುದರಿಂದ ಅಲ್ಲೇ ಪಂಚಮದ ಜಾಹಿರಾತು ಪುಟಗಳನ್ನು ಎಣಿಸಿಬಿಟ್ಟರೆ ಲೆಕ್ಕ ಸಿಕ್ಕಿಬಿಡುತ್ತದೆ. ಬಹುತೇಕ ಸರ್ಕಾರಿ ಜಾಹೀರಾತು ಆಗಿದ್ದು ಚೆಕ್ ಮೂಲಕ ಹಣ ಪಾವತಿಯಾಗಿರುತ್ತದೆ. ಅದೆಲ್ಲ ಸೇರಿ 27,750 ರೂಪಾಯಿ ಮಾತ್ರ ಆಗಿದೆ. ಎರಡು ಲಕ್ಷ ಎಂಬ ಗುಲ್ಲು ಮಿಥ್ಯಾರೋಪವಾಗಿದೆ.

○ ಪಂಚಮಕ್ಕೆ ಶೇಖರಿಸಿದ ನಿರಂತರ ಚಂದಾ 82,000 ಎಂಬ ಆರೋಪವಿದೆ. ನಿರಂತರ ಚಂದಾವನ್ನು ನಾನು (ಗೋವಿಂದಯ್ಯ) ಮತ್ತು ಗೆಳೆಯ ಶ್ರೀ ಮುನಿವೆಂಕಟಪ್ಪನವರು ಮಾತ್ರ ಶೇಖರಿಸಿದ್ದೇವೆ. ಅದು ಕೇವಲ 4,500 ರೂ ಗಳು ಮಾತ್ರ. ಇದರಲ್ಲೂ 500 ರೂ.ಗಳು ಗೆಳೆಯ ಮುನಿವೆಂಕಟಪ್ಪನವರಿಂದ ಇನ್ನೂ ಬರಬೇಕಾಗಿದೆ. ಈ ಆರೋಪವು ನಿಜವಾಗಬೇಕಾದರೆ 77,500 ರೂ.ಗಳನ್ನು ಶ್ರೀ ಮುನಿವೆಂಕಟಪ್ಪನವರು ನಮಗೆ ಗೊತ್ತಿಲ್ಲದಂತೆ ಶೇಖರಿಸಿದ್ದು ಆ ಹಣವನ್ನೆಲ್ಲ ಸಂಸ್ಥೆಗೆ ಕೊಟ್ಟಿಲ್ಲ ಎಂದಾಗುತ್ತದೆ. ಬಹುಶಃ ಈ ರೀತಿ ಇರಲಾರದು. ಬದಲಾಗಿ ಇದೂ ಮಿಥ್ಯಾರೋಪವಾಗುತ್ತದೆ.

○ 'ಹೋರಾಟದ ಹಾಡು' ಮೊದಲ ಮುದ್ರಣದ ಬಗ್ಗೆ ಆರೋಪಿಸುವುದನ್ನು ಆರೋಪಿಸುವವರು ಕೈಬಿಟ್ಟಿದ್ದಾರೆ. ಮೊದಲ ಮುದ್ರಣವು ಮೈಸೂರಿನ ರಾಜೇಂದ್ರ ಪ್ರಿಂಟರ್ಸ್‌ನಲ್ಲಿ 2,000ಪ್ರತಿ ಅಚ್ಚಾಗಿದೆ. ಇದನ್ನು ಸೇರಿಸಿದರೂ ಹೋರಾಟದ ಹಾಡುಗಳು ಪ್ರತಿಗಳ ಒಟ್ಟು ಮುದ್ರಣವು 4,000 ಮಾತ್ರವೇ ಆಗುತ್ತದೆ. ಆದರೆ ಇದಕ್ಕೆ 50 000 ಪ್ರತಿಗಳ ಮುದ್ರಣ ಎಂಬ ಆರೋಪವಿದೆ. ಈ ನಡುವೆ ಶ್ರೀ ಗಂಗಾರಾಮ ಚಂಡಾಳರು ವೈಯ[illegible]ಕ್ತಿಕವಾಗಿ ಸಂಘಟನೆಯ ಗಮನಕ್ಕೆ ಬಾರದಂ[illegible] ಹೋರಾಟದ ಹಾಡುಗಳನ್ನು ಮುದ್ರಿಸಿದ್ದಾ[illegible] ಎಷ್ಟು ಪ್ರತಿಗಳೋ ತಿಳಿಯದು. 50,00[illegible] ಪ್ರತಿಗಳು ಹೋರಾಟದ ಹಾಡು ಮುದ್ರಣ ಎಂ[illegible] ಆರೋಪ ನಿಜವಾಗಬೇಕಾದರೆ ಶ್ರೀ ಗಂಗಾರಾ[illegible] ಚಂಡಾಳರು 46,000 ಪ್ರತಿಗಳನ್ನು ಮುದ್ರಿ[illegible] ಬೇಕಾಗುತ್ತದೆ. ಬಹುಶಃ ಈ ರೀತಿ ಇರಲಾರದ[illegible] ಬದಲಾಗಿ ಇದೂ ಮಿಥ್ಯಾರೋಪವಾಗುತ್ತದೆ.

○ ಪಂಚಮ ರೈತ–ದಲಿತ ವಿಶೇಷ ಸಂಚಿಕೆ[illegible] 5,000 ಪ್ರತಿಗಳಲ್ಲಿ ಚಂದಾದಾರರಿಗೆ ಉ[illegible]ವಾಗಿ 2,000 ಪ್ರತಿಗಳನ್ನು ಕಳುಹಿಸಲಾ[illegible] ಮಾರಾಟಕ್ಕೆ ಉಳಿದುದು ಕೇವಲ 3,0[illegible] ಪ್ರತಿಗಳು ಮಾತ್ರವೇ. ಆದರೆ 20,000 ಪ್ರ[illegible]ಗಳಿಗೆ ತಲಾ ಐದು ರೂಪಾಯಿಯಂತೆ ಆಗಿ ಒಂ[illegible]

ಲಕ್ಷ ರೂಪಾಯಿ ಮೋಸ ನಡೆದಿದೆ ಎಂಬ ಮಿಥ್ಯಾರೋಪ ನಡೆದಿದೆ. ಆದರೆ ಮಾರಾಟಕ್ಕಾಗಿ ವಾಸ್ತವವಾಗಿ ಉಳಿದ ಮೂರು ಸಾವಿರ ಪ್ರತಿಗಳಲ್ಲಿ ಇನ್ನೂ 500 ಪ್ರತಿಗಳು ಖರ್ಚಾಗದೆ ಉಳಿದಿವೆ. ಈಗ ಆರೋಪ ಮಾಡುತ್ತಿರುವ ಗೆಳೆಯರೂ ಸೇರಿದಂತೆ ಅನೇಕಾನೇಕ ಕಾರ್ಯಕರ್ತರಿಂದ ಈ ಬಾಬ್ತು ಬಾಕಿ ಬರಬೇಕಾಗಿದೆ.

○ ಪಂಚಮ ವಿಶೇಷಾಂಕಕ್ಕಾಗಿ ಸಾರಾಯಿ ಬಾಟ್ಲಿಂಗ್ ಗುತ್ತಿಗೆದಾರರಿಂದ ಪಡೆದ ಜಾಹೀರಾತು ಹಣ ಒಂದು ಲಕ್ಷ ಎಂಬ ಆರೋಪವಿದೆ. ಹಣದ ಮೊತ್ತದಲ್ಲಾದರೂ ಈ ಆರೋಪ ನಿಜಕ್ಕೆ ಹತ್ತಿರವಾಗಿದೆ. ಅಂದರೆ ಪಡೆದ ಜಾಹೀರಾತು ಹಣ ಎಂಬತ್ತು ಸಾವಿರವಾಗಿದೆ. ಮತ್ತು ಇದು ಸಾರಾಯಿ ಬಾಟ್ಲಿಂಗ್ ಗುತ್ತಿಗೆದಾರರಿಂದ ಪಡೆದುದಲ್ಲ. ಈ ಜಾಹೀರಾತುಗಳು 'ಸಂಗಾತಿ' ಗಾಗಿ ಸಿಕ್ಕಿದ್ದು. ಆದರೆ ಸಂಗಾತಿ ಮೊದಲ ಸಂಚಿಕೆಯಲ್ಲಿ ಇಷ್ಟೊಂದು ಜಾಹಿರಾತನ್ನು ಪ್ರಕಟಿಸುವುದು ಸರಿಯಲ್ಲ ಎಂದು ಕಂಡಿದ್ದರಿಂದ ಅದನ್ನು ಪಂಚಮ ವಿಶೇಷಾಂಕವೊಂದರಲ್ಲಿ ಪ್ರಕಟಿಸಲು ನಿರ್ಧರಿಸಲಾಗಿತ್ತು. ಅಂತೆಯೇ ಒಂದೆರಡು ಜಾಹೀರಾತುಗಳನ್ನು ಆಗ ಮುದ್ರಣವಾಗುತ್ತಿದ್ದ ಪಂಚಮ ಪತ್ರಿಕೆಯಲ್ಲಿ ಮುದ್ರಿಸಲಾಯಿತು. ಆದರೆ ಇದನ್ನು ಕೆಲವು ಗೆಳೆಯರು ಆಕ್ಷೇಪಿಸಿದ್ದರಿಂದ ಆ ಮುದ್ರಿತ ಪ್ರತಿಗಳನ್ನು ರದ್ದುಪಡಿಸಲಾಯಿತು. ಈ ಹಣದಲ್ಲಿ ಅರವತ್ತು ಸಾವಿರವನ್ನು ಸಂಗಾತಿಗೆ ಪಾವತಿ ಮಾಡಿ ಇಪ್ಪತ್ತು ಸಾವಿರಗಳನ್ನು ಉಳಿಸಿಕೊಂಡು 'ಚರ್ಮ ಕೈಗಾರಿಕಾ ಸಹಕಾರ ಸಂಸ್ಥೆಗೆ ಸಂಬಂಧಿಸಿ ಬಳಸಲಾಗಿದೆ.

ಈ ಎಲ್ಲ ವ್ಯವಹಾರವೂ – ಹಣ ಪಡೆದಿದ್ದು ಹಣ ನೀಡಿದ್ದು, ಎಲ್ಲವೂ – ಚೆಕ್, ಡಿಡಿ ಮೂಲಕ ನಡೆದಿದೆ.

ಈ ಎಲ್ಲಾ ಲೆಕ್ಕಾಚಾರವನ್ನೂ ವಿವರವಾಗಿ ಸ್ಟೆನ್ಸಿಲ್ ಮಾಡಿಸಿ ಮದ್ದೂರಿನಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿಯ ಸದಸ್ಯರಿಗೆಲ್ಲ 15.12.85 ರಂದೇ ಒಪ್ಪಿಸಲಾಗಿದೆ.

ಗೋವಿಂದಯ್ಯ
ಮಾಜಿ ಸಂಪಾದಕ–ಪ್ರಕಾಶಕ
ದೇವನೂರು ಮಹಾದೇವ
ಮಾಜಿ ವ್ಯವಸ್ಥಾಪಕ ಸಂಪಾದಕ
'ಪಂಚಮ' ಪತ್ರಿಕೆ

ಆಗಿನ ಸಂಪಾದಕರಾಗಿದ್ದ ರಾಮದೇವರಾಕೆ ಮತ್ತು ಮುದ್ರಕರಾಗಿದ್ದ ನೆಲಮನೆ ಪ್ರಕಾಶನದ ದೇವೇಗೌಡ ಅವರ ಸ್ಪಷ್ಟನೆ.

ಕೆ. ದೇವೇಗೌಡ,
ಪ್ರಕಾಶಕರು ಮತ್ತು ಮುದ್ರಕರು,
ನೆಲಮನೆ ಪ್ರಕಾಶನ,
2514, ಕೆ. ಜಿ. ಕೊಪ್ಪಲು
ಮೈಸೂರು. 570 014

ನಮ್ಮ ಪ್ರಕಾಶನ ಸಂಸ್ಥೆಯಿಂದ ದಲಿತ ಸಂಘರ್ಷ ಸಮಿತಿಯವರಿಗೆ ಅನೇಕ ಪುಸ್ತಕ ಪತ್ರಿಕೆ ಪ್ರಕಟಿಸಿಕೊಟ್ಟಿದ್ದೇನೆ. ಒಳ್ಳೆಯ ಉದ್ದೇಶಕ್ಕಾಗಿ, ಎಂದೂ ವ್ಯಾಪಾರಿ ಮನೋಭಾವವಿಲ್ಲದೆ ವೈಯಕ್ತಿಕ ಕಷ್ಟಸುಖಗಳನ್ನು ಬದಿಗೊತ್ತಿ ಸಾಲ ಮಾಡಿ ಹಣ ಹೊಂದಿಸಿ ಕೆಲವು ಸಲ ಪ್ರಕಟಿಸಿದ್ದೇನೆ. ಇಂತಹದರಲ್ಲಿ ನಮ್ಮ ಪ್ರಕಾಶನ ಸಂಸ್ಥೆಯಿಂದ ಪ್ರಕಟಗೊಂಡ ಪತ್ರಿಕೆ ಪುಸ್ತಕಗಳ ಬಗ್ಗೆ ಯದ್ವಾತದ್ವಾ ಆರೋಪಿಸಿರುವುದು ನೋವಿನ ಸಂಗತಿಯಾಗಿದೆ.

ನಾನು "ಹೋರಾಟದ ಹಾಡು" ಗಳನ್ನು ಪ್ರಕಟಿಸಿರುವುದು ಕೇವಲ ಎರಡು ಸಾವಿರ ಪ್ರತಿಗಳು ಮಾತ್ರವೇ. ಆದರೆ ಎರಡು ಸಾವಿರಕ್ಕೆ ಬದಲಾಗಿ ಐವತ್ತು ಸಾವಿರ ಪ್ರತಿ ಅಚ್ಚು ಮಾಡಿದ್ದೇನೆ ಎಂಬ ಮಿಥ್ಯಾರೋಪವಿದೆ. ಹಾಗೆಯೇ ಪಂಚಮ ವಿಶೇಷಾಂಕವನ್ನು ನಾನು ಐದು ಸಾವಿರ ಪ್ರತಿಗಳನ್ನು ಮಾತ್ರ ಅಚ್ಚು ಮಾಡಿದ್ದೇನೆ. ಇದರಲ್ಲಿ ಎರಡು ಸಾವಿರ ಪ್ರತಿಗಳನ್ನು ಉಚಿತವಾಗಿ ಪಂಚಮ ಚಂದಾದಾರರಿಗೆ ನಾನೇ ಕಳುಹಿಸಿದ್ದೇನೆ.

ಯಾಕೆಂದರೆ ಆಗ ಪಂಚಮ ಪ್ರಕಾಶನದಲ್ಲಿ ಅಂಚೆ ವೆಚ್ಚ ಭರಿಸಲು ಕಾಸಿರಲಿಲ್ಲ. ಹಾಗಾಗಿ ಉಳಿದ ಮೂರು ಸಾವಿರ ಪ್ರತಿಗಳಿಗೆ ಲೆಕ್ಕಾಚಾರ ಕೇಳುವುದರ ಬದಲಾಗಿ ಇಪ್ಪತ್ತು ಸಾವಿರ ಪ್ರತಿಗಳೆಂದು ಮಿಥ್ಯಾರೋಪವಿದೆ. ಇಂಥ ಆರೋಪಗಳಿಗೆ ನಗಬೇಕೋ ಅಳಬೇಕೋ ತಿಳಿಯದು. ಈ ಬಗ್ಗೆ ಶ್ರೀ ಗಂಗಾರಾಂ ಚಂಡಾಲರು ಬಂದಿದ್ದಾಗ ನಾನು ಅವರಿಗೆ "ಯಾಕೆ ಸುಮ್ಮನೆ ಆರೋಪಿಸುತ್ತೀರಿ? ಪ್ರಕಟಿಸಿದ ನನ್ನಲ್ಲಿ ಲೆಕ್ಕಾಚಾರ ಉಂಟಲ್ಲಾ ನೋಡಿ" ಎಂದು ತೋರಿಸಿದರೆ ಅವರು ಅಂದದ್ದು: "6 ಲಕ್ಷ 82 ಸಾವಿರವನ್ನು ಯಾಕೆ ಆರೋಪಿಸುತ್ತಿದ್ದೇವೆ ಅಂದರೆ– 6 ಲಕ್ಷ ಹೋಗಲಿ 82 ಸಾವಿರವನ್ನಾದರೂ ಅವರು ಒಪ್ಪಬಹುದು ಅಂತ" ಎಂದು ಗಂಗಾರಾಂ ಚಂಡಾಲರು ಅಂದರು. ವಾಸ್ತವಾಂಶ ಬೇಕಿಲ್ಲದ ಇಂಥ ಚಾಳಿಯವರಿಗೆ ಲೆಕ್ಕ ತೋರಿಸಲು ಹೋದ ನಾನೇ ಮೂರ್ಖನೇನೋ ಅನ್ನಿಸಿತು.

ದಿನಾಂಕ: 22–10–86.

ಕೆ. ದೇವೇಗೌಡ.

ರಾಮದೇವ ರಾಕೆ, ಉಪಸಂಪಾದಕ,
ಪ್ರಜಾವಾಣಿ ಬೆಂಗಳೂರು.

ಒಂದು ಸ್ಪಷ್ಟನೆ

ಮಾಸಲತಿ ಪುಸ್ತಕವು ನನ್ನ ಮತ್ತು ಬಿ. ಕೃಷ್ಣಪ್ಪನವರ ಸಂಪಾದಕತ್ವದಲ್ಲಿ 1981ರಲ್ಲಿ ಅಚ್ಚಾಗಿದೆ. ಆದರೆ ಮಾಸಲತಿ ಪುಸ್ತಕವನ್ನು ಶ್ರೀ ಗೋವಿಂದಯ್ಯ ಹತ್ತು ಸಾವಿರ ಪ್ರತಿ ಅಚ್ಚು ಮಾಡಿಸಿರುವುದಾಗಿಯೂ, ಈ ಬಾಬ್ತು 10000 × 10 ರೂ. = 1 ಲಕ್ಷ ರೂ. ಮೋಸ ನಡೆದಿದೆ ಎಂದು ಸುಳ್ಳು ಆರೋಪಿಸಲಾಗುತ್ತಿದೆ. ಈ ಪುಸ್ತಕವನ್ನು ವಾಸ್ತವವಾಗಿ ಅಚ್ಚುಮಾಡಿಸಿದ ನಾನು ಕೇವಲ ಮೂರು ಸಾವಿರ ಪ್ರತಿಗಳನ್ನು ಮಾತ್ರ ಅಚ್ಚುಮಾಡಿಸಿದ್ದು ಇದರಲ್ಲಿ ಒಂದೂವರೆ ಸಾವಿರ ಪ್ರತಿಗಳನ್ನು ಪಂಚಮ ಚಂದಾದಾರರಿಗೆ ಉಚಿತವಾಗಿ ಕಳಿಸಲಾಗಿದೆ. ಉಳಿದ ಒಂದೂವರೆ ಸಾವಿರ ಪ್ರತಿಗಳನ್ನು ಮಾರಾಟಕ್ಕೆ ಬಿಟ್ಟಿದ್ದು ಶ್ರೀ ಗೋವಿಂದಯ್ಯ ಪಂಚಮ ಪ್ರಕಾಶನ ವಹಿಸಿಕೊಂಡಾಗ ನಾನು ಅವರಿಗೆ ವಹಿಸಿಕೊಟ್ಟ ಪ್ರತಿಗಳು ಕೇವಲ 600 ಮಾತ್ರವೇ.

ನಾನು ಗೋವಿಂದಯ್ಯನವರಿಗೆ ವಹಿಸಿಕೊಟ್ಟ ಈ ಎಲ್ಲಾ 600 ಪ್ರತಿಗಳು ಮಾರಾಟವಾದರೂ [illegible] ಶೇ. 33 ಕಳೆದು 600 × 6.75 = 4050 ರೂ. ಒಟ್ಟು ಹಣವನ್ನು ಈ ಬಾಬ್ತು ನಿರೀಕ್ಷಿಸಬಹುದಾಗಿದೆ. 15-6-86 ರಂದೇ ಶ್ರೀ ಗೋವಿಂದಯ್ಯ [illegible]ರುವ ಪ್ರಕಾಶನದ ಲೆಕ್ಕಾಚಾರದಲ್ಲಿ ಈ ಬಾಬ್ತು 3985 ರೂ. ಬಂದಿರುವುದು ನೋಡಿದರೇ ತಿಳಿಯುತ್ತದೆ. ಇಂಥ ಸ್ಪಷ್ಟ ಲೆಕ್ಕಾಚಾರ ಇರುವಾಗ ಶತ್ರುಗಳು ಮಾತ್ರವೇ ಈ ರೀತಿ ಅತಿರೇಕದ ಆರೋಪ ಮಾಡಬಲ್ಲರು. ಆದರೆ ನಮ್ಮ ಮಿತ್ರರೇ ಯಾಕಾಗಿ ಈ ರೀತಿ ಮಾಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ.

20.10.86

– ರಾಮದೇವ ರಾಕೆ


ಕೊನೆಯಾದ ಕನಸುಗಾರ ಬೋಳಬಂಡೆಪ್ಪ

ಕಳೆದ ಸಂಚಿಕೆಯಲ್ಲಿ ಗೆಳೆಯ ಬೋಳಬಂಡೆಪ್ಪ ಅವರ ಕ್ಯಾನ್ಸರ್ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವಂತೆ 'ಪಂಚಮ' ವಿನಂತಿಸಿಕೊಂಡಿತ್ತು. 'ಪಂಚಮ' ಪ್ರಕಟವಾಗಿ ಎಲ್ಲರ ಕೈಸೇರುವ ಹೊತ್ತಿಗೆ ಬೋಳ ಬಂಡೆಪ್ಪ ಎಲ್ಲರನ್ನೂ ಅಗಲಿ ದೂರಹೋಗಿಬಿಟ್ಟರು.

ಬೋಳಬಂಡೆಪ್ಪ ಬಂಡೆಗಳ ಮೇಲೆ ಚಿಗುರೊಡೆಯುವ ಕನಸುಗಳೊಂದಿಗೆ ನಮ್ಮೊಂದಿಗೆ ಸೇರಿಕೊಂಡವರು. - ಅಕ್ಷರಗಳೂ ಅಸ್ಪೃಶ್ಯರಂತೆ ಕಾಣತೊಡಗಿದ್ದ ಕುಟುಂಬದಿಂದ ಬಂದವರು. ಆದಕ್ಕೇ ಇರಬೇಕು, ಅವರು ಆಯ್ಕೆ ಮಾಡಿಕೊಂಡದ್ದು ಕೂಡ ಅಕ್ಷರಗಳೊಂದಿಗಿನ ಸಹಯೋಗವನ್ನ.


ಕಲಿಕೆಯ ಪ್ರಾಥಮಿಕ ಹಂತದಿಂದಲೇ ಬೋಳ ಬಂಡೆಪ್ಪ ಭಾಷಣ, ನಾಟಕ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ, ಪ್ರೌಢಶಾಲಾ ಶಿಕ್ಷಣಕ್ಕೇರುವ ವೇಳೆಗೆ ಸಣ್ಣ ಸಣ್ಣ ಕವನ, ಕತೆಗಳನ್ನು ಬರೆಯುವ ಖಯಾಲಿಗೆ ಸಿಕ್ಕಿಬಿದ್ದರು. ಸ್ಥಳೀಯ ಪತ್ರಿಕೆಗಳಲ್ಲಿ ಬೆಳಕು ಕಾಣುತ್ತಿದ್ದ ಅವರ ಬರಹಗಳು ಹಲವರ ಮೆಚ್ಚುಗೆಗೆ ಪಾತ್ರವಾಗಿದ್ದವು.

ಕಾಲೇಜು ತಲುಪುವ ವೇಳೆಗೆ ವಯಸ್ಸಿಗೆ ತಕ್ಕ ಹಾಗೆ ಹದಿಹರಯದ ಕನಸುಗಾರಿಕೆ ಕವನ ರೂಪ ತಾಳಿತ್ತು. ಅವರ 'ಕಾವ್ಯ ಸುಂದರಿ' ಕವನ ಕಾಲೇಜಿನ ಕವಿಗೋಷ್ಠಿಯಲ್ಲಿ ಬಹುಮಾನ ಗಳಿಸಿತು. 'ದಡಸೇರದ ದೋಣಿ', 'ಇದೂ ಪ್ರಪಂಚ' ಕಿರುಕತೆಗಳನ್ನೂ ಬರೆದರು.



ಕನಸುಗಾರ ಗೆಳೆಯ ಬೋಳ ಬಂಡೆಪ್ಪ ಅವರನ್ನು ಕೊಲೆಗಾರ ಕ್ಯಾನ್ಸರ್ ಬಲಿತೆಗೆದುಕೊಂಡ.

ಅಕ್ಟೋಬರ್ 2ರಂದು ಅವರು ತಮ್ಮ ಪತ್ನಿ ಮತ್ತು ನಾಲ್ಕು ಮಕ್ಕಳನ್ನೂ ಹಾಗೂ ನಮ್ಮನ್ನೂ ಬಿಟ್ಟು ಹೋದರು.



ಹುಟ್ಟಿಲ್ಲ! ಹುಟ್ಟಿದರೂ ಏನನ್ನೂ
ಮಾಡಲಿಲ್ಲ !
ಸಾಯುವ ಕೊನೆಗೆ ಒಂದಿಷ್ಟು
ಹೃದಯವನ್ನು ಬಿಚ್ಚಲಿಲ್ಲ !
ಬಂಜರದ ನೆಲವನ್ನು ಬಂಗಾರದ
ನೆಲವನ್ನಾಗಿ ಹಸನು ಮಾಡುವ
ಸುಗ್ಗಿಯ ಕಾಲ ಬಂದಿಲ್ಲ !
ಹೌದು ಗೆಳೆಯಾ........

ಕೆಲವರು ಮಲಗಿದ್ದಾ ಮಹಲು–
–ಗಳಲ್ಲಿ ಏಳುತ್ತಾರೆ ಕೆಂಪು
ಕೋಟೆಯಲ್ಲಿ ! ಆದರೂ ತೂಕಡಿ
ಸುತ್ತಲೇ ಇದ್ದಾರೆ ತುರಾಯಿಗಳ
ತೂಬುಗಳಲ್ಲಿ !

ಗೆಳೆಯಾ—

ಕೆಲವರು ಬತ್ತಿಹೋದ ಕಣ್ಣುಗಳಿಂದ
ಕಣ್ಣೀರ ಬಾರದ ಒಣಗಿದ ಎಲೆಗಳು
ಹೊಟ್ಟೆ ಬೆನ್ನಿಗಂಟಿಕೊಂಡ ಎಲುಬಿನ
ಹಂದರಗಳು

ಎಷ್ಟು ವಿಚಿತ್ರವೆಂದು
ಅಚ್ಚರಿ ಪಡಬೇಡಿ
ಮಂತ್ರಿ-ಮರಿಮಂತ್ರಿ
ಚಾಕು ಚೂರಿಗಳ ಕಂತ್ರಿ

ಡಾಕ್ಟರ್-ಪ್ಲೀಡರ್–ಲೀಡರ್–ರೀಡರ್
ಗುಮಾಸ್ತೆ ಹುದ್ದೆಗಳನ್ನು ಕೆಲವರು
'ಚಪರಾಸಿ"–ಝಾಡಮಾಲಿ–ಹೇಲೆತ್ತುವ
ನೌಕರಿಗಳನ್ನು ಅನೇಕರು
ರಿಸರ್ವೇಶನ್ ಮಾಡಿಸಿಕೊಂಡಿದ್ದಾರೆ.
ಹೌದು ಗೆಳೆಯಾ –

ದೇಶನಾಯಕರ "ಹುಟ್ಟ" "ಸತ್ತ" ದಿನಗಳನ್ನು
ತಮ್ಮ "ಶೋಕಿ" "ಶೋಕೇಸ್"ಗಳಲ್ಲಿಟ್ಟು
"ಪಬ್ಲಿಕ್" ಹರಾಜು ಮಾಡುವವರು
ಕೆಲವರಾದರೆ,
ತತ್ವಗಳ ಗಾಳಿಯನ್ನು ಬಲೂನ್‌ಗಳಲ್ಲಿ
ತುಂಬಿ ಆಕಾಶಕ್ಕೆ ಹಾರಿಸುತ್ತಾರೆ ಕೆಲವರು
ಇದನ್ನು ತಮಾಷೆ ಎನ್ನಬೇಡ.

ನಂತರದ ಸಾಮಾಜಿಕ ಬದಲಾವಣೆಗಳು ಅವರನ್ನು ಕನಸುಗಾರಿಕೆಯ ಒಂದು ದಡದಿಂದ ಇನ್ನೊಂದು ದಡಕ್ಕೆ ಒಯ್ದು ತಂದವು. ಬಸವಲಿಂಗಪ್ಪನವರ ವಿರುದ್ಧ ನಾಡಿನಾದ್ಯಂತ ಹೆಡೆಬಿಚ್ಚಿದ ಬೂಸಾ ಚಳವಳಿಗೆ ಪ್ರತಿ ಚಳವಳಿಯೊಂದನ್ನು ರಾಯಚೂರಿನಲ್ಲಿ ಸಂಘಟಿಸಲು ಕಾರಣರಾದವರಲ್ಲಿ ಬೋಳಬಂಡೆಪ್ಪ ಕೂಡ ಒಬ್ಬರು. ಬಾಬು ಭಂಡಾರಿಗಲ್, ಕೆ. ಕರಿಯಪ್ಪ ಮುಂತಾದ ಗೆಳೆಯರೊಡನೆ ಸಂಘಟಿಸಿದ ಈ ಪ್ರತಿ ಚಳವಳಿಯ ನೇತೃತ್ವವನ್ನು ಆರ್. ಅಂಜನೇಯಲು ವಹಿಸಿದ್ದರು.

ಈ ಹೊಸ ಸಾಮಾಜಿಕ ಅರಿವಿಗೆ ಕಣ್ಣು ಬಿಡತೊಡಗಿದ್ದ ಬೋಳಬಂಡೆಪ್ಪ 1979 ಮಾರ್ಚ್ 9ರಂದು ಧರ್ಮಸ್ಥಳದಲ್ಲಿ ನಡೆಯಲಿದ್ದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಗೋಷ್ಠಿ ಇಡಲು ಒತ್ತಾಯಿಸಿದವರಲ್ಲಿ ಒಬ್ಬರು. ಮುಂದೆ ಈ ಒತ್ತಾಯ ತಂದ ಬೆಳವಣಿಗೆಗಳು 'ಬಂಡಾಯ ಸಾಹಿತ್ಯ ಸಂಘಟನೆ'ಗೆ ನಾಂದಿ ಹಾಡಿದವು.


1980ರ ವೇಳೆಗೆ ಆಗಿನ್ನೂ ರಾಯಚೂರು ಜಿಲ್ಲೆಯಲ್ಲಿ ದ.ಸಂ.ಸ. ಬೆಳೆಯದಿರುವ ಹೊತ್ತಲ್ಲಿ ಪ್ರತಿ ಹಾಸ್ಟೆಲ್, ಪ್ರತಿ ಓಣಿ ಪ್ರತಿ ಗಲ್ಲಿ ಸುತ್ತಿ ದ.ಸಂ.ಸ. ಸಂಘಟಿಸಿದವರು ಬೋಳ ಬಂಡೆಪ್ಪ. ಮುಂದೆ ದ.ಸಂ.ಸ.ದ ಜತೆಗೆ ನಿಕಟ ಸಂಪರ್ಕ ಇಟ್ಟುಕೊಂಡು ಸಾಹಿತ್ಯ ಮತ್ತು ಹೋರಾಟ ಬೆಸೆಯುವಲ್ಲಿ ಬೋಳಬಂಡೆಪ್ಪನವರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಈ ಹೊತ್ತಲ್ಲೇ ಅವರು ತೆಲುಗಿನ ಚೆರಬಂಡರಾಜು ಅವರ ಅನೇಕ ಕವಿತೆ ಹಾಡುಗಳನ್ನು ಅನುವಾದಿಸಿದ್ದು.



ಬೋಳಬಂಡೆಪ್ಪ ತಮ್ಮ ಪತ್ನಿ ಮತ್ತು ಮಕ್ಕಳೊಂದಿಗೆ

ಹೀಗೆ ಈ ದೇಶಕ್ಕೆ ಅಂಟಿದ ಅಸಮಾನತೆಯ ಕ್ಯಾನ್ಸರ್ ರೋಗದ ವಿರುದ್ಧ ಸಾಂಸ್ಕೃತಿಕ ಹೋರಾಟಕ್ಕೆ ಅಣಿಯಾಗುತ್ತಿರುವ ಹೊತ್ತಲ್ಲೇ ಸ್ವಲ್ಪ ಕೂಡಾ ಸುಳಿವು ಕೊಡದ ಕ್ಯಾನ್ಸರ್ ಬೋಳಬಂಡೆಪ್ಪನವರನ್ನು ತನ್ನ ಕೈಗೆ ತೆಗೆದುಕೊಂಡಿತು. ವ್ಯವಸ್ಥೆಗೆ ಅಂಟಿದ ಕ್ಯಾನ್ಸರ್ ಹಾಗೂ ವ್ಯಕ್ತಿಗತವಾಗಿ ತನಗಂಟಿದ ಕ್ಯಾನ್ಸರ್ ಜತೆ ಮೃತ್ಯುಮುಖದಲ್ಲೂ ಹೋರಾಡುತ್ತಾ ಬೋಳಬಂಡೆಪ್ಪ ಅಕ್ಟೋಬರ್ 2ರಂದು ಕಣ್ಣುಮುಚ್ಚಿದರು. ಆ ಕಣ್ಣು ಕಂಡ ಕನಸುಗಳೊಂದಿಗೆ ಸಾಗುತ್ತಿರುವ ದಲಿತ ಸಮುದಾಯದ ನೆನಪಲ್ಲಿ ಬೋಳಬಂಡೆಪ್ಪ ಸದಾ ಹಸಿರು.

ನಮ್ಮನ್ನಗಲಿದ ಬೋಳಬಂಡೆಪ್ಪ, ಪತ್ನಿ ಮತ್ತು ನಾಲ್ವರು ಮಕ್ಕಳನ್ನೂ ಬಿಟ್ಟುಹೋಗಿದ್ದಾರೆ. ಚರಿತ್ರೆಯ ಅಂಗಳದಲ್ಲಿ ಅನಾಥರಾದ ನಾವು ಬಾಳ ಹಾದಿಯಲ್ಲಿ ತಬ್ಬಲಿಗಳಾದ ಅವರೊಂದಿಗಿದ್ದೇವೆ.



ಇಲ್ಲಿ! ಇಲ್ಲಿ! ನೋಡು
ಯಾರೋ ಬರುತ್ತಾರೆ, ಏನೋ ಮಾಡುತ್ತಾರೆ
ಈ "ಬರುವವನಿಗಾಗಿ" ಅದೆಷ್ಟೋ ಲೋಳೆ
ಜಿದ್ದ ಸಹಸ್ರ ಕಣ್ಣುಗಳು ಆಸೆಯಿಂದ
ನೋಡುತ್ತಿರುವಾಗ
ಮೇಲಾಡುತ್ತಿರುವ ರಣಹದ್ದುಗಳು
ಈ ಬತ್ತಿದ ಕಣ್ಣುಗಳು ಕುಕ್ಕುತ್ತಲೇ ಇವೆ.
ಕಲ್ಲಿಗೆ ಬಡೆಯುವ ಅಬ್ಬರಗಳನ್ನು ಕೇಳಿ
ಕೇಳಿ ಇವರ ಕಿವಿಗಳು ಹುಲುಸಾದ
ಕೂದಲುಗಳಿಂದ ಮುಚ್ಚಿಹೋಗಿವೆ.
ಆದರೂ... ಇವರಿಗೆ ಅದರ ಪರಿವಿಲ್ಲ
ತಮ್ಮ ಶಕ್ತಿಯ ಅರಿವಿಲ್ಲ
ತಾವೇ ದೇಶದ ಬೆನ್ನೆಲುಬೆಂಬುದೂ ಗೊತ್ತಿಲ್ಲ !
ಆದರೂ... ನಿರಾಶೆಯಿಲ್ಲ ಗೆಳೆಯಾ
ಸ್ವಾಭಿಮಾನ ಸತ್ತಿಲ್ಲ.
ಹೋರಾಟದ ಕಿಡಿ ಇನ್ನೂ ಉರಿಯುತ್ತಲೇ
ಇದೆಯಲ್ಲಾ !

ಹಾರಿದ ಬೆಲೂನ್ "ಟುಪ್" ಎಂದಾಗ
"ಉದ್ಧಾರ" ಉದ್ಧಾರ ಉದ್ದುದ್ದಿನ ಹಾರ
ಗಳನ್ನು ಹಾಕಿಸಿಕೊಂಡು
ದೇಶವು ಪ್ರಗತಿಯ ಮುಂಚೂಣಿಯಲ್ಲಿ
ದೆಯೆಂದು ಬೊಬ್ಬೆ ಹೊಡೆಯುತ್ತಾ
ತಾವೇ ದೇಶವಾಗಿ ಆರ್ಥಿಕ ಮುಂಚೂಣಿಯಲ್ಲಿದ್ದಾರೆ.
ಇನ್ನೂ ಕೆಲವರಿದ್ದಾರೆ ಇವರು
ಅವರನ್ನು "ಸೋಷಲಿಜಂ" ಬಿಸಿಲ್ಗುದುರೆ
ಯನ್ನೇರಿಸಿ ಸೀದಾ ಸ್ವರ್ಗಕ್ಕೆ ಸವಾರಿ
ಮಾಡಿಸುತ್ತಾರೆ.

● ಬೋಳಬಂಡೆಪ್ಪ

(ಇದು ಅವರ ಕೊನೆಯ ಸ್ವರಚಿತ ಕವನ)

ಜ್ವಾಲಾಮುಖಿಯ ಮೇಲಿನ
ಒಂದು ವಿಶಿಷ್ಟ ಭೂಮಿ ಹೋರಾಟ

ಆತ ಗುಜರಾತಿನಿಂದ ಬಂದ. ಸರ್ಕಾರದ ಕಣ್ಣಿಗೆ ಮಣ್ಣೆರಚಿ ಸುತ್ತಲ ಏಳೆಂಟು ಹಳ್ಳಿಗಳ 3767 ಎಕರೆ ಭೂಮಿ ಕಬಳಿಸಿದ. ತನ್ನ ಕಾರ್ಖಾನೆಗೆ ಕಬ್ಬು ಬೆಳೆಸತೊಡಗಿದ.

ಸರ್ಕಾರ ಕ್ರಮ ಕೈಗೊಳ್ಳುವುದಿರಲಿ, ಸರ್ಕಾರಿ ದಾಖಲೆ ಪತ್ರಗಳೇ ಮಾಯವಾದವು. ಆ ಭೂಮಿಯಲ್ಲಿ ಗೇಣಿಗೆ ದುಡಿದು ತಬ್ಬಲಿಗಳಾಗಿದ್ದ ಬಡರೈತರು ಇಂದು ದ.ಸಂ.ಸ. ದಡಿ ಹೋರಾಟ ನಡೆಸತೊಡಗಿದ್ದಾರೆ. ಕಾರ್ಖಾನೆಯ ಮಾಲೀಕರ ದೌರ್ಜನ್ಯವೂ ಮುಂದುವರೆದಿದೆ.

● ಉರುಕುಂದಪ್ಪ

ಆಸುಪಾಸಿನ ಏಳೆಂಟು ಹಳ್ಳಿಗಳ 3767 ಎಕರೆ ಭೂಮಿ. ಈ ಭೂಮಿಗೆಲ್ಲಾ ಒಬ್ಬನೇ ಮಾಲಿಕ, ಮಾಲಿಕನ ಒಡೆತನದಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆ. ಈ ಕಾರ್ಖಾನೆಗೆ ಕಬ್ಬು ಬೆಳೆಯಲೆಂದೇ ಇಷ್ಟೊಂದು ಭೂಮಿಯನ್ನು ಸರ್ಕಾರ ಅನಾಯಾಸವಾಗಿ ಒದಗಿಸಿದೆ.

ಇಡೀ ಭೂಮಿಯ ಅಂಗುಲಂಗುಲದಲ್ಲೂ ಏನು ನಡೆಯುತ್ತಿದೆ ಎಂಬುದನ್ನು ವೀಕ್ಷಿಸಲು ಪುಟ್ಟಗುಡ್ಡದ ಮೇಲೊಂದು ಕಾವಲು ಕಟ್ಟೆ. ಇಲ್ಲಿ ನಿಂತು ನೋಡಿದರೆ ಆ ಭೂಮಿಯ ಯಾವ ಭಾಗದಲ್ಲಿ ಏನು ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಕಾವಲು ಕಟ್ಟೆಯ ಬದಿಯಲ್ಲೇ ಒಂದು ಸುಂದರ ಕುಟೀರ. ಹುಲ್ಲು ಛಾವಣಿಯ ಮೇಲೆಲ್ಲಾ ಬೋಗನ್ ವಿಲ್ಲಾ ಹೂಗಳ ಜಾಲರಿ. ಕುಟೀರದ ಸುತ್ತ ಸೂಜಿ ಮಲ್ಲಿಗೆ, ಆವರಣದಲ್ಲಿ ಅಂದದ ಹೂ ಕುಂಡಗಳು. ಇದು ಈ ಮಾಲಿಕರು, ಅವರ ಆಪ್ತರು, ಸರ್ಕಾರಿ ಅತಿಥಿಗಳು ಬಂದರೆ ತಂಗಿ 'ಆನಂದ' ಅನುಭವಿಸಲು ಕಟ್ಟಿದ ತಂಗುದಾಣ. ಅರ್ಧ ಕಿ.ಮೀ. ಉದ್ದದ ಈ ಗುಡ್ಡದ ಮೇಲೆ ತಂಗುದಾಣದ ಬಾಗಿಲಿಗೆ ಯಾವುದೇ ಅಡ್ಡಿ ಆತಂಕ ಇಲ್ಲದೆ ಸಲೀಸಾಗಿ ಕಾರು ಬಂದು ತಲುಪುವಂತಹ ರಸ್ತೆ. ರಸ್ತೆಯ ಇಕ್ಕೆಲಗಳಿಗೂ ಕಲ್ಲು ನಾರೆಯ ರಕ್ಷಾಗೋಡೆ.

—ಯಾವುದೋ ಊಳಿಗಮಾನ್ಯಕಾಲದ ಪಾಳೆಯಗಾರನ ಮಾ ಪುಡಿಸವಾಬನ ಟೆರ್ರಿಟರಿಯೋ ಅಥವಾ ಜಮೀನುದಾರನೊಬ್ಬನ ಸುತ್ತ ಹೆಣೆದ ಕತೆಗಾಗಿ ಶ್ಯಾಂಬೆನಗಲ್, ಗೋವಿಂದ ನಿಹಲಾನಿ ಹಾಕಿಸಿರುವ ಸಿನಿಮಾ ಸೆಟ್ ಅಂದುಕೊಂಡಿರೇನು?

ಛೆ! ಖಂಡಿತ ಅಲ್ಲ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವಾದಿ ರಾಷ್ಟ್ರ ಎನಿಸಿಕೊಂಡ ಸ್ವತಂತ್ರ ಭಾರತದ, ಮೌಲ್ಯಾಧಾರಿತ ರಾಜಕಾರಣ ಚಿಗುರೊಡೆಯುತ್ತಿರುವ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಒಂದು ನೈಜ ಚಿತ್ರಣ.

ಹೌದು, ಕೊಪ್ಪಳ ತಾಲೂಕಿನ ಹಿಟ್ನಾಳ ಸರ್ಕಲ್ಲಿನ ವ್ಯಾಪ್ತಿಯಲ್ಲಿ ಬರುವ ಬಸಾಪುರ, ಬಂಡಿ ಹರ್ಲಾಪುರ, ಮಹಮ್ಮದನಗರ, ರಾಜಾರಾಮಪೇಟೆ, ಶಿವಪುರ, ಹಿತ್ತಿಪಟ್ಟೆ, ನಾರಾಯಣ ಪೇಟೆ ಈ ಮುಂತಾದ ಗ್ರಾಮಗಳ ನಡುವೆ ಸುತ್ತುವರೆದ 3767 ಎಕರೆ ಭೂಮಿಯಲ್ಲಿ ಇಂದು ಕೂಡ ಯಾರು ಬೇಕಾದರೂ ಕಾಣಬಹುದಾದ ಚಿತ್ರ ಇದು.

ಈ ಎರಡು ಬೃಹತ್ ಆಸ್ತಿಗಳ ಅದೃಷ್ಟವಂತ ಮಾಲಿಕ ರಾಜಸ್ಥಾನದ ಸುಶೀಲಬಾಬು ಮರಾರ್ಕ.

—ಅದು ಹೇಗೆ? ಸರ್ಕಾರ ಕತ್ತೆಕಾಯುತ್ತಿದೆಯೇ? ಕತ್ತೆಯಂಥ ಕಾನೂನುಗಳಿಗೇನು ಗೆದ್ದಲು ಹಿಡಿದಿವೆಯೇ? ಎಂಬಿತ್ಯಾದಿ ಪ್ರಶ್ನೆಗಳು ಎದುರಾಗದಿರಲಾರವು. ಸರ್ಕಾರಿ ಅಧಿಕಾರಿಗಳನ್ನು ಜೇಬಿಗಿಳಿಬಿಟ್ಟು ಕಾನೂನಿನ ಕಣ್ಣಿಗೆ ಮಣ್ಣೆರಚಿ ಈ ಆಧುನಿಕ ನವಾಬ ಮೆರೆಯುತ್ತಿರುವುದು ಇದೀಗ ಬೆಳಕಿಗೆ ಬಂದಿದೆ.

ಮೊದಲು ಮುನಿರಾಬಾದಿನಲ್ಲಿ ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಕಾರ್ಖಾನೆ ಈ ಕಾರಣಕ್ಕಾಗಿಯೇ 3767-ಎಕರೆ 34 ಗುಂಟೆ ಭೂಮಿಯನ್ನು ಪಡೆಯಿತು. ಆ ನಂತರ 1955ರಲ್ಲಿ 2267 ಎಕರೆ 34ಗುಂಟೆ ಭೂಮಿಯನ್ನು ಕಾರ್ಖಾನೆ ಸರ್ಕಾರಕ್ಕೆ ಬಿಟ್ಟುಕೊಡಬೇಕೆಂದು ಇನ್ನು ಉಳಿದ 1500ಎಕರೆ ಭೂಮಿಯನ್ನು ಮಾತ್ರ ಇಟ್ಟುಕೊಳ್ಳಬಹುದೆಂದು ಅಂದಿನ ಹೈದ್ರಾಬಾದ್ ಸರ್ಕಾರದೊಡನೆ ಒಪ್ಪಂದವಾದ ಉಲ್ಲೇಖ ಇದೆ. ಆದರೆ ಕಾರ್ಖಾನೆ ಒಂದೇ ಒಂದು ಅಂಗುಲ ಭೂಮಿಯನ್ನೂ ಸರ್ಕಾರದ ವಶಕ್ಕೆ ಒಪ್ಪಿಸಲಿಲ್ಲ. ಅಷ್ಟೇಕೆ ಆಕುರಿತ ದಾಖಲೆಗಳೊಂದೂ ಇಂದು ಲಭ್ಯವಿಲ್ಲ. ಈ ಎಲ್ಲ ದಾಖಲೆಗಳನ್ನು ನಾಶಮಾಡಲಾಗಿದೆ ಎಂಬ ಗುಮಾನಿ ಇದೆ. ಜತೆಗೆ 3767 ಎಕರೆ 34ಗುಂಟೆ ಜಮೀನನ್ನು ಮುನಿರಾಬಾದ್‌ನ ಸಾಲಾರ್‌ಜಂಗ್ ಕಾರ್ಖಾನೆ ಯಾರಿಂದ ಯಾವಾಗ ಪಡೆದುಕೊಂಡಿತು ಎಂಬುದಕ್ಕೆ ದಾಖಲೆಗಳೇ ಇಲ್ಲ. ಆದರೆ ಕಾರ್ಖಾನೆಯ ಪಹಣಿಯಲ್ಲಿ 1457ಎಕರೆ 31ಗುಂಟೆ ಕಬ್ಜಾ ಇದ್ದಂತೆ ತೋರಿಸಲಾಗಿದೆ. ಆದರೆ ಯಾರಿಂದ ಈ ಭೂಮಿ ಬಂತೆಂಬುದನ್ನು ಉಲ್ಲೇಖಿಸಿಲ್ಲ.

1983ರ ಏಪ್ರಿಲ್ 12ರಂದು ಕೊಪ್ಪಳದ ಭೂನ್ಯಾಯ ಮಂಡಳಿ ಒಂದು ನ್ಯಾಯಯುತ ನಿರ್ಣಯ ಮಾಡಿತು. ಅಂದು ನಡೆದ ಭೂನ್ಯಾಯ ಮಂಡಳಿ ಸಭೆಯಲ್ಲಿ ಅಸಿಸ್ಟೆಂಟ್ ಕಮೀಷನರ್ ಪ್ರದೀಪ್‌ಸಿಂಗ್ ಭೂಸುಧಾರಣಾ ಕಾಯ್ದೆಯ 66ನೇ ವಿಧಿಯಂತೆ ಕಾರ್ಖಾನೆ 1971 ಎಕರೆ 21ಗುಂಟೆ ಹೆಚ್ಚುವರಿ ಭೂಮಿ ಹೊಂದಿರುವುದಾಗಿ ಘೋಷಿಸಿದರು.

ಕರ್ನಾಟಕ ಭೂ ಸುಧಾರಣೆ ಕಾಯ್ದೆ ಪ್ರಕಾರ ಕಾರ್ಖಾನೆಗೆ 50 ಎಕರೆಗಿಂತ ಹೆಚ್ಚು ಭೂಮಿ ಇರಬಾರದೆಂಬ ನಿಯಮ ಇದೆ. ಸಕ್ಕರೆ ಕಾರ್ಖಾನೆ ಮಾಲೀಕರು ಭೂಸುಧಾರಣೆ ಕಾಯ್ದೆಯಿಂದ ಪಾರಾಗಲು 1971ರಲ್ಲಿ ವಿಜಯನಗರ ಜಾಯಿಂಟ್ ಕೋ-ಆಪರೇಟೀವ್ ಫಾರ್ಮಿಂಗ್ ಸೊಸೈಟಿ ಲಿ. ಪ್ರಾರಂಭಿಸಿ ತಮ್ಮ ಹೆಚ್ಚುವರಿ ಭೂಮಿ ಎಕರೆ 1174-20 ಗುಂಟೆಯನ್ನು ತಮ್ಮ ಕುಟುಂಬದ ಸದಸ್ಯರಿಗೆ, ಸ್ನೇಹಿತರಿಗೆ ಸೊಸೈಟಿ ಮೂಲಕ ವರ್ಗಾಯಿಸಿದರು. ಈ ಕುತಂತ್ರ 1972-73ರಲ್ಲಿ ನಡೆಯಿತು. ಈ ಸೊಸೈಟಿಯ ಸದಸ್ಯರು 166 ಜನ. ಇದರಲ್ಲಿ 64 ಜನ ಭೂಹಿಡುವಳಿ ಹೊಂದಿದ್ದಾರೆ. ಉಳಿದ ಸದಸ್ಯರೆಲ್ಲರೂ ವ್ಯಾಪಾರಸ್ಥರು, ಉದ್ಯಮಿಗಳು. ಈ ಸೊಸೈಟಿಯ ಸದಸ್ಯರು ಕೊಪ್ಪಳ ತಾಲೂಕಿನ ಬಸಾಪುರದಲ್ಲಾಗಲಿ ರಾಯಚೂರು ಜಿಲ್ಲೆಯಲ್ಲಿಯಾಗಲೀ ಕರ್ನಾಟಕ ರಾಜ್ಯದಲ್ಲಿಯೇ ಆಗಲಿ ಇಲ್ಲ. ಈ ಸೊಸೈಟಿಯು ತನ್ನ ಸದಸ್ಯರಲ್ಲದವರಿಗೆ ಭೂಮಿಯನ್ನು ಸಾಗುವಳಿ ಮಾಡಲು ಕೊಟ್ಟು ಕರ್ನಾಟಕ ಸರಕಾರದ ಸಹಕಾರಿ ಕಾನೂನನ್ನು ಉಲ್ಲಂಘಿಸಿದೆ.

ರಾಯಚೂರು ಜಿಲ್ಲೆಯ ಡೆಪ್ಯೂಟಿ ರಿಜಿಸ್ಟ್ರಾರ್ ಕೋ-ಆಪರೇಟೀವ್ ಸೊಸೈಟಿ ಅವರು ಈ ಸೊಸೈಟಿಯನ್ನು ಮಾರ್ಚ್ 1986ರಲ್ಲಿ ಲಿಕ್ವಿಡೇಟ್ ಮಾಡಿ ಸ್ಥಳೀಯ ಕಂದಾಯ ನಿರೀಕ್ಷಕರನ್ನು ಸೊಸೈಟಿಯ ಲಿಕ್ವಿಡೇಟರನ್ನಾಗಿ ನೇಮಿಸಿದರು. ಆದರೆ ಕಾರ್ಖಾನೆಯವರು ಕೋರ್ಟಿನಿಂದ ನಾಲ್ಕುವಾರದ ತಡೆಯಾಜ್ಞೆ ತಂದರು.

ಈ ಸೊಸೈಟಿಯು 25 ಲಕ್ಷ ರೂಪಾಯಿ ನಷ್ಟದಲ್ಲಿದೆಯೆಂದು ಬೇಕೆಂತಲೆ ತೋರಿಸಲಾಗಿದೆ. ರೂ.2[illegible] ಲಕ್ಷ ಸಾಲರ್‌ಜಂಗ್ ಸಕ್ಕರೆ ಕಾರ್ಖಾನೆಯಿಂದ ಸಾ[illegible] ತೆಗೆದುಕೊಂಡಂತೆಯೂ ತೋರಿಸಲಾಗಿದೆ. ಇದ[illegible] ಉದ್ದೇಶ ಏನೆಂದರೆ, ಹೆಚ್ಚುವರಿ ಭೂಮಿಯನ್ನು ಕಾರ್ಖಾನೆಗೆ ಎತ್ತಿ ಹಾಕುವುದು ಇಲ್ಲವೆ ಮಾರಾಟ ಮಾಡುವುದು. ತನ್ಮೂಲಕ ಹೆಚ್ಚುವರಿ ಭೂಮಿಯನ್ನು ತಾನೇ ಬಳಸಿಕೊಳ್ಳುವ ಮಾಲಿಕರ ಜಾ[illegible] ಉಪಾಯವಿದು.



ಸಮಸ್ಯೆಗಳ ಗೋಜಲು

1. ಸಾಲರ್‌ಜಂಗ್ ಸಕ್ಕರೆ ಕಾರ್ಖಾನೆಯ ಮಾಲೀಕರು ತಮ್ಮ ಒಟ್ಟು ಭೂಮಿಯ ಹದ್ದುಬಸ್ತಿಯನ್ನು ತೆಗೆದು ಹಾಕಿದ್ದಾರೆ. ಸರ್ವೇ ಮಾಡಿದಾಗ ಹಾಕಿದ ಬಾಂದ್ ಕಲ್ಲುಗಳಿಗೆ ಹದ್ದುಬಂದಿ ಎನ್ನುತ್ತಾರೆ. ಸರ್ಕಾರದವರಿಗೆ ಸರ್ವೇ ಮಾಡಲು ಅನಾನುಕೂಲವಾಗಲಿ ಎಂದು ಕಾರ್ಖಾನೆ ಮಾಲೀಕ ಹೂಡಿದ ಕುತಂತ್ರವಿದು.

2. 1981ರಲ್ಲಿ ರಾಯಚೂರು ಜಿಲ್ಲಾಧಿಕಾರಿಗಳು ಈ ಭೂವಿವಾದದ ಭೂಮಿಯನ್ನು ಸರ್ವೇ ಮಾಡಬೇಕೆಂದು ಸರಕಾರವನ್ನು ಕೇಳಿಕೊಂಡರು. ಅದರಂತೆ ಸಹಾಯಕ ನಿರ್ದೇಶಕರು, ಭೂಮಾಪನಾ ಇಲಾಖೆ ಕೊಪ್ಪಳ–ಇವರು ಸರ್ವೇಕ್ಷಣೆಯನ್ನೇನೋ ಮಾಡಿದರು. ಆದರೂ ಕೂಡ ಅವರಿಗೆ ಕಾರ್ಖಾನೆಯ ವಶದಲ್ಲಿರುವ ಭೂಮಿ, ಸರಕಾರದ ಭೂಮಿ ಯಾವುದೆಂದು ಗುರುತಿಸಲು ಸಾಧ್ಯವಾಗಿಲ್ಲವಂತೆ!

3. ಈ ಕಾರ್ಖಾನೆಯ ಭೂಮಿಗೂ ಸರಕಾರಿ ಶೇತವಾರಿ ಮಾಡಿಸಿಲ್ಲ! (ಭೂಮಿಯ ಸುತ್ತಮುತ್ತಲು ಯಾರಿದ್ದಾರೆಂದು ದಿಕ್ಕಿಗೆ ಅನುಗುಣವಾಗಿ ಅವಶ್ಯ ಕಾಗದ ಪತ್ರ)

4. ಕಾರ್ಖಾನೆಯವರು ಭೂಮಿಯನ್ನು ಗೇಣಿದಾರರಿಗೆ ಗುತ್ತಿಗೆಗೆ ಕೊಡುತ್ತ ಬಂದಿದ್ದಾರೆ. ಅದರಲ್ಲಿಯ ಕೆಲವರನ್ನು ಸರಕಾರದ ವಿರುದ್ಧ, ಹೋರಾಟಗಾರರ ವಿರುದ್ಧ ಎತ್ತಿ ಕಟ್ಟುವ ಸಾಧ್ಯತೆಯೂ ಇದೆ.

ಈ ಮೇಲ್ಕಾಣಿಸಿದ ಭೂಮಿಯ ಕೆಲ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಇತ್ತೀಚೆಗೆ ಬಂದ ಸಹಾಯಕ ಆಯುಕ್ತರು ಶ್ರೀ ಟಿ.ಎಂ. ವಿಜಯಭಾಸ್ಕರ ಕೆಲಕ್ರಮಗಳನ್ನು ಕೈಗೊಂಡು ಮುಚ್ಚಿಹೋಗಿದ್ದ ಪ್ರಕರಣಕ್ಕೆ ಚಾಲನೆ ನೀಡಿದ್ದಾರೆ.

1. ತಮ್ಮ ಭೂಮಿಯ ಹದ್ದುಬಂಧಿಯನ್ನು ಕಿತ್ತು ಹಾಕಿರುವ ಸಾಲರ್‌ಜಂಗ್ ಸಕ್ಕರೆ ಮಾಲೀಕರ ಮೇಲೆ ದಂಡ ಹಾಕಲು ಆದೇಶವಿತ್ತಿದ್ದಾರೆ.

2. ಎನ್.ಎ. (ನಾನ್ ಅಗ್ರಿಕಲ್ಚರ್) ಮಾಡಿಸದೇ, ಪರವಾನಗಿ ಪಡೆಯದೇ ಕಟ್ಟಿದ ಕಟ್ಟಡಗಳನ್ನು ಪರಿಶೀಲಿಸಿ ದಂಡ ವಿಧಿಸಿದ್ದಾರೆ.

3. ಕಾರ್ಖಾನೆಯವರು ತಮ್ಮ ಭೂಮಿಯನ್ನು ಗೇಣಿದಾರರಿಗೆ ಗುತ್ತಿಗೆ ಕೊಟ್ಟಿದ್ದಾರೆ. ಇದು ಭೂಸುಧಾರಣೆ ಕಲಂ 589ರ ಪ್ರಕಾರ ಕಾನೂನು ಬಾಹಿರವೆಂದು ಸಾರಿ ಜಮೀನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಗುತ್ತಿಗೆ ಪಡೆದು ಇಲ್ಲಿಯವರೆಗೆ ಸಾಗುವಳಿ ಮಾಡುತ್ತ ಬಂದ ಬಡರೈತರಿಂದ ಅರ್ಜಿ ಸ್ವೀಕರಿಸುತ್ತಿರುವರು. (ಹೆಚ್ಚುವರಿ ಭೂಮಿಯನ್ನು ಅವರಿಗೆ ಕೊಡಲು)

4. ಕರ್ನಾಟಕ ಸರಕಾರದ ಸಹಕಾರ ಸಂಘ ಕಾನೂನು ಉಲ್ಲಂಘನೆ ಮಾಡುತ್ತಿರುವುದರಿಂದ (ತನ್ನ ಸದಸ್ಯರಲ್ಲದವರಿಗೆ ಭೂಮಿಯನ್ನು ಸಾಗುವಳಿ ಮಾಡಲು ಕೊಟ್ಟಿದ್ದು ಇತ್ಯಾದಿ) ವಿಜಯನಗರ ಕೋ–ಆಪರೇಟೀವ್ ಸೊಸೈಟಿಯನ್ನು ಲಿಕ್ವಿಡೇಟ್ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿ ಸೊಸೈಟಿಯನ್ನು ಲಿಕ್ವಿಡೇಟ್ ಮಾಡಿಸಿರುವರು.

ಇವು ಈ ಭೂ ಹೋರಾಟವನ್ನು ಬಗೆಹರಿಸುವಲ್ಲಿಯ ಕೆಲವು ದಿಟ್ಟ ಪುಟ್ಟ ಹೆಜ್ಜೆಗಳು ಮಾತ್ರ.

ದ.ಸಂ.ಸ. ಹೋರಾಟ

ಸುಮಾರು ಒಂದು ವರ್ಷದಿಂದ ಕೊಪ್ಪಳದ ದಲಿತ ಸಂಘರ್ಷ ಸಮಿತಿಯವರು ಏಳೆಂಟು ಹಳ್ಳಿಗಳಲ್ಲಿರುವ ಎಲ್ಲಾ ಬಡ ರೈತರನ್ನು ಸೇರಿಸಿಕೊಂಡು ಅಲ್ಲಲ್ಲಿ ದಲಿತ ಸಂಘರ್ಷ ಸಮಿತಿಯ ಘಟಕಗಳನ್ನು ಪ್ರಾರಂಭಿಸಿ ಬಡರೈತರ ಮೇಲೆ, ಕೂಲಿಕಾರರ ಮೇಲೆ ಆಗುತ್ತಿದ್ದ ದೌರ್ಜನ್ಯ ತಡೆಗಟ್ಟಿ ಕಾರ್ಖಾನೆಯವರು ತಮ್ಮದೆಂದು ಹೇಳುತ್ತಿದ್ದ ಸರಕಾರಿ ಭೂಮಿಯನ್ನು, ಬಡರೈತರು ಬಿತ್ತಿ ಬೆಳೆದ ಬೆಳೆಯನ್ನು ಕಾರ್ಖಾನೆಯವರ ಕಿರುಕುಳದಿಂದ ವಶಪಡಿಸಿಕೊಳ್ಳಲು ಸಾಧ್ಯವಾಗದೇ ಹೋದಾಗ ಬಡರೈತರಿಗೆ ದಲಿತ ಸಂಘರ್ಷ ಸಮಿತಿಯ ತರುಣ ಕಾರ್ಯಕರ್ತರು ನೆರವಾದರು. ಸ್ವತಃ ತಾವೇ ಬೆಳೆಯನ್ನು ಕೊಯ್ದು ಕಣ ಮಾಡಿಕೊಟ್ಟರು ಮತ್ತು ವಿಜಯನಗರ ಕೋ - ಆಪರೇಟೀವ್ ಫಾರ್ಮಿಂಗ್ ಸೊಸೈಟಿಯನ್ನೂ ಲಿಕ್ವಿಡೇಟ್ ಮಾಡಬೇಕೆಂದು ಸ್ಥಳೀಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೊಪ್ಪಳ ಇವರಿಗೆ ಒತ್ತಾಯಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಜಿಲ್ಲಾ ಸಹಕಾರಿ ಸಂಘಗಳ ಅಧಿಕಾರಿಗಳಿಗೂ ಒತ್ತಡ ತಂದರು.

ಮುನಿರಾಬಾದ್‌ಗೆ ಬಂದಿದ್ದ ಮುಖ್ಯಮಂತ್ರಿ ಹೆಗಡೆ ಹಾಗೂ ಕಂದಾಯ ಮಂತ್ರಿ ಎಸ್.ಆರ್. ಬೊಮ್ಮಾಯಿಯವರಿಗೆ ಗೇರಾವ್ ಹಾಕಿ ವಿಜಯನಗರ ಕೋ ಆಪರೇಟೀವ್ ಫಾರ್ಮಿಂಗ್ ಸೊಸೈಟಿಯನ್ನು ಲಿಕ್ವಿಡೇಟ್ ಮಾಡಬೇಕೆಂದು ಈ ಸೊಸೈಟಿಯ ಅಥವಾ ಈ ಕಾರ್ಖಾನೆಯ ಹೆಚ್ಚುವರಿ ಭೂಮಿಯನ್ನು ಹಂಚಬೇಕೆಂದು ಒತ್ತಾಯಿಸಿದರು.

ಕಾರ್ಖಾನೆಯವರ ದೌರ್ಜನ್ಯ

ಇತ್ತೀಚೆಗೆ ಮಹಮ್ಮದನಗರ, ಬಂಡಿ ಹರ್ಲಾಪುರ, ಬಸಾಪುರ ಮುಂತಾದ ಗ್ರಾಮಗಳಿಗೆ ನಮ್ಮ ಪತ್ರಿಕೆ ಸಲುವಾಗಿ ಮಾಹಿತಿ ಸಂಗ್ರಹಕ್ಕೆ ಹೋದಾಗ ಗುಂಪು–ಗುಂಪಾಗಿ ಜನ ಬಂದು ತಮ್ಮ ಮೇಲೆ ನಡೆದ ದೌರ್ಜನ್ಯದ ಬಗ್ಗೆ ನನಗೆ ಹೇಳಿದರು.

ಭೂ ರಹಿತ ಕೂಲಿಕಾರರು ತಮ್ಮ ಖಬ್ಜಾದಲ್ಲಿರುವ ಭೂಮಿಯಲ್ಲಿ ಸಾಗುವಳಿಗೆ ತೊಡಗಿದಾಗ 1973ರಲ್ಲಿ 300ಜನ ಕಾರ್ಖಾನೆಯ ವ್ಯಕ್ತಿಗಳನ್ನು ಕರೆತಂದು ಮನಬಂದಂತೆ ಕಾರ್ಖಾನೆಯ ಮಾಲೀಕ ಹೊಡೆಸಿದ. ಈ ಹೊಡೆತ ತಾಳಲಾರದೆ ಬಾಲಪ್ಪ, ಹರಿಜನ ಸತ್ತು ಹೋದ. ಗುಡಗುಂಟಿ ಬಾಲಪ್ಪ, ಮನ್ನಾರೆಡ್ಡಿ, ಕಾನಯ್ಯಸ್ವಾಮಿ, ಮೋಹನರೆಡ್ಡಿ ಗಾಯಗೊಂಡರು.

(11 ನೇ ಪುಟಕ್ಕೆ)



ನ್ಯಾಯಕ್ಕಾಗಿ, ಬದುಕಿಗಾಗಿ ಬೀಡು ಹೂಡಿದ ಬೆಸ್ತರು

ಹೊತ್ತು ಹೊತ್ತಿನ ಕೂಳಿಗೂ ಭೋರ್ಗರೆವ ಕಡಲನ್ನೇ ನಂಬಿ ಕೊಂಡ ಬೆಸ್ತರನ್ನು ಸರ್ಕಾರ, ಪಟ್ಟಭದ್ರರು ಕೂಡಿ ಬೀದಿಗೆ ತಳ್ಳಿದರು.

ಅವರು ಮೀನು ಒಣಗಿಸಲು ಬಳಸುತ್ತಿದ್ದ ಭೂಮಿಯನ್ನೂ ಕಬಳಿಸಿದರು. ಬೀದಿಗೆ ಬಿದ್ದವರು ಹೋರಾಟದ ಮೊರೆ ಹೋಗಿದ್ದಾರೆ.

ಬೆಸ್ತರ ಬದುಕಿಗೆ ಕೊಳ್ಳಿ

ಎದುರಿಗೆ ಸೃಷ್ಟಿಯ ರಹಸ್ಯಗಳನ್ನೆಲ್ಲ ತುಂಬಿಕೊಂಡು ನಿಂತ ನೀಲಿಸಮುದ್ರ. ಪಕ್ಕದಲ್ಲಿ ಇತಿಹಾಸದ ಖಾಲಿಪುಟಗಳು. ಆ ಪುಟಗಳಿಗೆ ಮೈಯ ಬೆವರು ಜಿನುಗಿಸುತ್ತ, ಉತ್ತು, ಬಿತ್ತು ಮಣ್ಣಿನೊಂದಿಗೆ ಒಂದಾಗಿಹೋದರೂ ಹಿಡಿಯನ್ನಕ್ಕೂ ಆತಂಕ ಪಡುವವರ ನಿಟ್ಟುಸಿರಿನ ಅಕ್ಷರಗಳು.

ಕಾಲ ಬದಲಾಯಿತು.

ಪರಿಸ್ಥಿತಿ– ನಾಗರೀಕತೆ ಬದಲಾಗಿ ಹೊಸರೂಪು ಪಡೆದವು. ಆದರೆ ಆ ಜನಮಾತ್ರ ಹಾಗೆಯೇ ಮೊದಲಿನಂತೆಯೇ ಆತಂಕ–ದುಗುಡದಲ್ಲಿ ಬದುಕನ್ನು ರೂಢಿಸಿಕೊಂಡರು.

ಚುಮುಚುಮು ನಸುಕಿನಲ್ಲೇ ಈ ಸಮುದ್ರದ ಮಕ್ಕಳು ಎದ್ದು, ಬಲೆ ಸರಿಪಡಿಸಿಕೊಂಡು ಹಾಯಿ ಹತ್ತಿ ನೀಲಿನೀರಿನಲ್ಲಿ ಕರಗಿಬಿಡುತ್ತಾರೆ. ಅನೇಕ ಕಣ್ಣುಗಳು ಅವರ ನಿರೀಕ್ಷೆಯಲ್ಲಿರುತ್ತವೆ. ಅವರ ಬಾಯಿ ಕಾಣದ ದೇವರನ್ನು, "ಹೋದವರಿಗೆ ಏನೂ ಆಗದಿರಲಿ" ಎಂದು ಪ್ರಾರ್ಥಿಸುತ್ತವೆ.

ಅವರು ಬರುತ್ತಾರೆ. ಬಲೆತುಂಬ ಕಪ್ಪುಮೀನಿನ ಗೊಂಚಲು. ಮನೆಯ ಹೆಣ್ಣುಗಳು ಸಂಭ್ರಮದಿಂದ ಎದುರುಗೊಳ್ಳುತ್ತಾರೆ. ಮಕ್ಕಳು ಕೇಕೆಹಾಕುತ್ತವೆ. ಇದು ಅವರ ನಿತ್ಯ ಬದುಕು.

ಭೋರ್ಗರೆವ ಸಮುದ್ರದಲೆಗಳೊಡನೆ ಚೆಕ್ಕಂದವಾಡುತ್ತ, ಜೀವಪಣವಿಟ್ಟು; ಗೆದ್ದು ಬರುವ, ಇಲ್ಲ ಅಲೆಯೊಂದಿಗೆ ಸೇರಿ ಸಮುದ್ರದ ತಳ ಸೇರುವ ಅವರಿಗೆ "ಬೆಸ್ತರು" ಎನ್ನುತ್ತಾರೆ.

ಬೆಸ್ತ ತಂದ ಮೀನು–ಸಿಗಡಿಗಳನ್ನು ಆತನ ಮನೆ ಹೆಣ್ಣು ಒಣಗಿಸಲು ಹಾಕುತ್ತಾಳೆ. ಅದಕ್ಕೆ ಸಮುದ್ರದ ಪಕ್ಕದಲ್ಲಿಷ್ಟು ಜಾಗ. ಎಳೆಬಿಸಿಲಿನಲ್ಲಿ ಮನೆಹೆಣ್ಣು, ಆಕೆಯ ಮಕ್ಕಳೊಂದಿಗೆ ಮೀನು ಒಣಗಿಸುತ್ತಿದ್ದರೆ. ಮಕ್ಕಳು ಮರಳದಂಡೆಯಲ್ಲಡಗಿದ ಕಪ್ಪೆಚಿಪ್ಪು ಹೆಕ್ಕುವುದು. ಉಸುಕಿನ ಮೇಲೆ ಚಿತ್ತಾರ ಬಿಡಿಸುವುದು... ಆಟ.

ಇದ್ದಕ್ಕಿದಂತೆ ಈ ಬೆಸ್ತಕುಟುಂಬಗಳು ಮೀನು ಒಣಗಿಸುವ ಜಾಗಕ್ಕೆ ಯಾರದೋ ಕಾಕದೃಷ್ಟಿ ತಗುಲಿ, ಆ ಕಾಗೆ ಜಾಗ ಕಬಳಿಸಿ . ಇವರನ್ನು ಅನಾಥರನ್ನಾಗಿಸುತ್ತದೆ.

ಉಡುಪಿಯಲ್ಲಾದದ್ದೂ ಇದೇ.

"ಕೋಪವರು" ಪರಿಶಿಷ್ಟಜಾತಿಯ ಸಂಘಕ್ಕೆ ಈ ಹಿಂದೆ "ಮಲ್ಪೆ" ಬಂದರಿನಲ್ಲಿ ಮೀನು ಒಣಗಿಸಲೆಂದು, ಒಂದೆಕರೆ ಜಾಗವಿತ್ತು. ಯಾವ ತೊಂದರೆಗಳೂ ಇರಲಿಲ್ಲ. ಇದ್ದಕ್ಕಿದ್ದಂತೆ ಸರಕಾರಕ್ಕೆ ಬಂದರು ಅಭಿವೃದ್ಧಿ ಪಡಿಸಬೇಕೆಂಬ ಆಲೋಚನೆ ಬಂತು. ಸರಿ, ಅದು ಈ ಜಾಗವನ್ನು ಕಬಳಿಸಿ ಅವರನ್ನು ನಿರ್ಗತಿಕರನ್ನಾಗಿಸಿತು. ಬೆಸ್ತರು ಪರಿತಪಿಸತೊಡಗಿದಾಗ ಹೊಸ ಸ್ಥಳವೊಂದನ್ನು ಮೀನುಒಣಗಿಸಿಕೊಳ್ಳಲು ತೋರಿಸಿದರು.

ಮೀನುಗಾರರು ಹೊಸಸ್ಥಳದಲ್ಲಿ ಬದುಕುಹೂಡಲು ನಡೆದರು. ಆದರೆ ಅಲ್ಲಿಯೂ ಮೊಗೇರರ ಸಂಘದಿಂದ ಅಡ್ಡಿ. ಇವರಿಗೆ ದಿಕ್ಕುತೋಚದಾಯ್ತು. ಬಂದರು ಇಲಾಖೆಗೆ, ಸಮಾಜಕಲ್ಯಾಣ ಇಲಾಖೆಗೆ, ಶಾಸಕರಿಗೆ ಮನವಿ ಮಾಡಿಕೊಂಡರು. ಎಂದಿನಂತೆ ಪ್ರಯೋಜನ ಶೂನ್ಯ.

ಕಡೆಗೆ ದ.ಸಂ.ಸ. ಉಡುಪಿತಾಲೂಕು ಸಮಿತಿ ರಚಿಸಿ ಚಳುವಳಿ ಪ್ರಾರಂಭಿಸಿತು. ಅಲ್ಲಿನ ಶಾಸಕಿ ಮನೋರಮಾ ಮಧ್ವರಾಜರ ಮನೆಯ ಮುಂದೆ ಧರಣಿ. ಮರುದಿನ ಪ್ರತಿದಿನದಂತೆ ಕೆಲಸಕ್ಕೆ ಹೋದಾಗ ಮೀನು ವ್ಯಾಪಾರಿಗಳ ಸಂಘ ಇವರು ಸಂಘಟಿತರಾದದ್ದು ಕಂಡು ಕೆಲಸ ಕೊಡಲು ನಿರಾಕರಿಸಿತು.

ಬದುಕಿಗಾಗಿ ಇವರು ನಡೆಸುವ ಹೋರಾಟದಲ್ಲಿ ರಾಜಕೀಯ ವಿಷ ಬೀಜ ಬಿತ್ತಿತು. ಶಾಸಕಿಯ ಮಂದಿಮಾಗಧ "ಚೆಡ್ಡಿ"ಗಳು ಮರುದಿನ ಕಡಲತೀರದ ಕೋಳಿ "ಉದಯವಾಣಿ"ಯಲ್ಲಿ ಆ ಸ್ಥಳ ಅರಸ್ಸೆಸ್‌ನ ಶಾಲಾ ಮೈದಾನದ್ದೆಂದು ಸರ್ವೆನಂಬರೊಂದು ನೀಡಿದರು. ಈ ಸರ್ವೆನಂಬರಿಗೂ ಸ್ಥಳದ ಸರ್ವೆನಂಬರಿಗೂ ತಾಳೆಯೇ ಇರಲಿಲ್ಲ.

ತಮ್ಮ ಅನ್ನವನ್ನು ತಾವೇ ಸಂಪಾದಿಸುತ್ತ, ಪರರ ಹಂಗಿಲ್ಲದೇ ಸ್ವಾಭಿಮಾನದಿಂದ ಬದುಕುತ್ತಿದ್ದ ಮುನ್ನೂರು ಬೆಸ್ತ ಕುಟುಂಬಗಳು ಜಾತಿ, ಆರ್ಥಿಕ ಗತ್ತು, ಪ್ರಬಲರ ರಾಜಕೀಯ ತುಳಿತದಿಂದ ನರಳುತ್ತಿದ್ದಾರೆ.

ಆದರೂ ದಲಿತ ಸಂಘರ್ಷಸಮಿತಿ ನ್ಯಾಯಯುತ ಬೇಡಿಕೆಗಾಗಿ ಹೋರಾಟವನ್ನು ಮುಂದುವರಿಸಿದೆ.

ರಾಜಕಾರಣದ ಮಂದಿ, ಸರಕಾರ ಇತ್ತ ಗಮನ ಹರಿಸಿದರೆ ಮುನ್ನೂರು ನಿರ್ಗತಿಕ ಕುಟುಂಬಗಳನ್ನು ಉಳಿಸಿದಂತಾಗುತ್ತದೆ.

ಸರ್ಕಾರ ಮಂಜೂರು ಮಾಡಿದ ಜಮೀನಿನ ಸ.ಸಂ: 166/85–86–262/ICI

ಚಂದಾ ವಿವರ

ಬಿಡಿಪ್ರತಿ :	1 ರೂ.
ವಾರ್ಷಿಕ ಚಂದಾ :	25 ರೂ.
ಆಜೀವ ಚಂದಾ :	250 ರೂ.

ಡಿ. ಡಿ. ಅಥವಾ ಎಂ. ಓ. ಮೂಲಕ ಮಾತ್ರ ಚಂದಾ ಸ್ವೀಕರಿಸಲಾಗುವುದು.

(9 ನೇ ಪುಟದಿಂದ)

ಇವರೆಲ್ಲಾ ಬಂಡಿಹರ್ಲಾಪುರ ಗ್ರಾಮದವರು. ಇನ್ನೊಂದು ಪ್ರಕರಣದಲ್ಲಿ ಬಂಡಿ ಹರ್ಲಾಪುರದ ಸರ್ವೇ ನಂಬರು 1ರ ಮೋಹನರೆಡ್ಡಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣಾರೆಡ್ಡಿಗೆ ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಯ ವಾಚ್‌ಮನ್ ಹೊಡೆದಾಗ ಕೈಮುರಿದು ಹೋಯಿತು. ಆತನು ಕೈ ಸೊಟ್ಟಾದದ್ದನ್ನು ಖುದ್ದಾಗಿ ನನಗೆ ತೋರಿಸಿದ. ಬಂಡಿ ಹರ್ಲಾಪುರದ ಅದೇ ಸರ್ವೇನಂಬರು 1ರಲ್ಲಿ ತಿಪ್ಪಣ್ಣ ಹರಿಜನ ಕೆಲಸಮಾಡುತ್ತಿರುವಾಗ ಸಾಲಾರ್‌ಜಂಗ್ ಕಾರ್ಖಾನೆಯವರು ಜೀಪಿನಲ್ಲಿ ಬಂದು, ತಿಪ್ಪಣ್ಣ ಬಿತ್ತಿದ ಹಲಸಂದಿ ಸಸಿಯನ್ನು ಟ್ರ್ಯಾಕ್ಟರದಿಂದ ನಾಶಪಡಿಸುತ್ತಿರುವಾಗ ತಿಪ್ಪಣ್ಣನ ತಾಯಿ ಭಾಗಮ್ಮ ತಡೆಗಟ್ಟಲು ಅಡ್ಡ ಹೋದಳು. ಆ ಹೆಣ್ಣು ಮಗಳನ್ನು ಓಡಿಸ್ಯಾಡಿ ಟ್ರ್ಯಾಕ್ಟರ್‌ನಿಂದ ತಗುಲಿಸಿ ಬೀಳಿಸಿದ್ದಾರೆ. ಆ ನಂತರ ಸದರಿ ಪ್ರಕರಣವನ್ನು ಕೊಪ್ಪಳ ದಲಿತ ಸಂಘರ್ಷ ಸಮಿತಿಯವರು ಪೊಲೀಸ್ ಸ್ಟೇಶನ್ನಿಗೆ ದೂರು ನೀಡಿ ಟ್ರ್ಯಾಕ್ಟರ್ ಸೀಜ್ ಮಾಡಿಸಿದರು.

ಮಹಮ್ಮದ್‌ನಗರದ ಕೆಲ ಕೂಲಿಕಾರರು ಗಿಡಗಂಟೆ ಕಡಿದು ಭೂಮಿ ಸಾಗುವಳಿ ಮಾಡುತ್ತಿದ್ದಾಗ ಹಲವಾರು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳನ್ನು ಹೊಡೆದು ಟ್ರ್ಯಾಕ್ಟರಿನಲ್ಲಿ ತುಂಬಿ ಮುನಿರಾಬಾದಿನ ಸಕ್ಕರೆ ಕಾರ್ಖಾನೆಗೆ ಕರೆದೊಯ್ದು ಬಂಧನದಲ್ಲಿರಿಸಿ, ನಂತರ ಮರುದಿನ ಬಿಟ್ಟಿದ್ದಾರೆ. ಕಾನೂನನ್ನು ಕೈಗೆತ್ತಿಕೊಂಡು ಮನಬಂದಂತೆ ಕಾರ್ಖಾನೆಯವರು ವರ್ತಿಸಿದ ಅನೇಕ ಪ್ರಕರಣಗಳಿವೆ. ಇವು ಕೆಲವು ಸ್ಯಾಂಪಲ್ ಅಷ್ಟೇ.

"ಜೋಷಿಯ ಕಿತಾಪತಿ"

ವೆಂಕಣ್ಣ ಭಟ್ ಜೋಷಿ ಕೊಪ್ಪಳದ ತಹಸೀಲು ಆಫೀಸಿನಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡುತ್ತಿದ್ದರು. ದುರ್ವ್ಯವಹಾರ ಕಾರಣಕ್ಕಾಗಿ ಇವರನ್ನು ನೌಕರಿಯಿಂದ ಸರಕಾರ ಕಿತ್ತುಹಾಕಿತ್ತು. ನಂತರ ಸಾಲಾರ್ ಜಂಗ್ ಸಕ್ಕರೆ ಕಾರ್ಖಾನೆಯಲ್ಲಿ ಈತ ಪಬ್ಲಿಕ್‌ರಿಲೇಶನ್ ಆಫೀಸರ್ ಆಗಿ ನೌಕರಿ ಗಿಟ್ಟಿಸಿಕೊಂಡ. ಕಾರ್ಖಾನೆಯ ಮಾಲೀಕನದೇ ಆದ ವಿಜಯನಗರ ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿಯ ಮ್ಯಾನೇಜರ್ ಆಗಿಯೂ ಕಾರ್ಯ ನಿರ್ವಹಿಸುತ್ತಾ, ಕಾರ್ಖಾನೆಯ ಭೂಮಿಯನ್ನು ಹದ್ದುಬಸ್ತಿಯಲ್ಲಿಟ್ಟುಕೊಳ್ಳಲು ಗೂಂಡಾಗಳನ್ನು ಬಡರೈತರ ಮೇಲೆ, ಕೂಲಿಕಾರರ ಮೇಲೆ ಛೂ ಬಿಡುವ ಯಶಸ್ವೀ ಕಾರ್ಯ ಮಾಡುತ್ತಾ ಬಂದಿರುತ್ತಾನೆ. ಈತ ಹಲ್ಲೆಮಾಡಿಸುವುದರಲ್ಲಿ ಮತ್ತು ಕೋರ್ಟಿನಿಂದ ಸ್ಟೇ ತರುವುದರಲ್ಲಿ ಪ್ರವೀಣ. ಇದೀಗ ಈತನಿಗೆ ಹೋರಾಟದ ಬಿಸಿ ತಗುಲಿದ್ದುದರಿಂದ ದಲಿತ ಸಂಘರ್ಷ ಸಮಿತಿಯವರು ದಾರಿಯಲ್ಲಿ ಕಾಣುತ್ತಲೇ ಕಾರನ್ನು ಜೋರಾಗಿ ಓಡಿಸಲು ಹೇಳುತ್ತಾನೆ, ಇಲ್ಲವೇ ಹಿಂದಕ್ಕೆ ತಿರುಗಿಸಲು ಡ್ರೈವರನಿಗೆ ಹೇಳುತ್ತಾನೆ. ಈ ಭೂವಿವಾದಕ್ಕೆ ಸಂಬಂಧಿಸಿದ ದಾಖಲೆಗಳು ಕಳೆದುಹೋಗಲಿಕ್ಕೆ ಕಾರಣಪುರುಷ ಆತನೇ ಎಂಬುದು ದಲಿತ ಸಂಘರ್ಷ ಸಮಿತಿಯವರ ಆರೋಪ.

ಸುಮಾರು ಹತ್ತು ಹನ್ನೆರಡು ವರ್ಷಗಳಿಂದಲೂ ಈ ಭೂವಿವಾದ ಇದೆ. ಬಡರೈತರು, ಕೂಲಿಕಾರರು ಅಂದಿನಿಂದ ಹೋರಾಡುತ್ತಾ ಬಂದಿದ್ದಾರೆ. ಸುಮಾರು ಒಂದು ವರ್ಷದಿಂದ ಕೊಪ್ಪಳ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಈ ಭೂ ಹೋರಾಟಕ್ಕೆ ಒಳ್ಳೆಯ ನಾಯಕತ್ವ ಒದಗಿಸಿದ್ದಾರೆ. ಇತ್ತೀಚೆಗೆ ಕೊಪ್ಪಳ ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ ಅಂಬೇಡ್ಕರ್ ಜಯಂತಿಯ ಕಾರ್ಯಕ್ರಮದಲ್ಲಿ ಕೊಪ್ಪಳದ ಪ್ರಗತಿಪರ ಸಂಘಟನೆಗಳೂ ಕೂಡ ಈ ಭೂ ಹೋರಾಟಕ್ಕೆ ಬೆಂಬಲ ಸೂಚಿಸಿವೆ.

ಸರಕಾರ ಈ ಎರಡೇ ಕ್ರಮಗಳನ್ನು ಕೈಗೊಂಡರೂ ಸಾಕು. ಸಮಸ್ಯೆ ಸರಳವಾಗಿ ಬಗೆ ಹರಿಯುತ್ತದೆ.

1) ಸಾಲಾರ್‌ಜಂಗ್ ಸಕ್ಕರೆ ಕಾರ್ಖಾನೆಯ 3767 ಎಕರೆ 34 ಗುಂಟೆಯನ್ನು ಸರ್ವೇಗೆ ಒಳಪಡಿಸಿ ಎಲ್ಲೆಲ್ಲಿ ಕಾರ್ಖಾನೆಯ ಭೂಮಿಯಿದೆ ಎಂಬುದನ್ನು ಹೋರಾಟಗಾರರಿಗೆ, ಭೂರಹಿತ ಕೂಲಿಕಾರರಿಗೆ ತಿಳಿಸಬೇಕು.

2) ಕಾರ್ಖಾನೆಗೆ ಭೂಕಾಯ್ದೆಯಂತೆ ದಕ್ಕಬೇಕಾದ 50–00 ಎಕರೆ ಭೂಮಿಯನ್ನು ಬಿಟ್ಟುಕೊಟ್ಟು ಉಳಿದ ಭೂಮಿಯನ್ನು ವಶಪಡಿಸಿಕೊಂಡು ಗೇಣಿ ಮಾಡುತ್ತಾ ಬಂದ ಭೂರಹಿತರಿಗೆ ಹಂಚಬೇಕು. ಈ ತಾಖತ್ತು ತನಗಿಲ್ಲವೆಂದು ಸರಕಾರಕ್ಕೆ ಅನಿಸಿದರೆ ಕಾರ್ಖಾನೆಯ ಐವತ್ತು ಎಕರೆ ಗುರುತಿಸಿ ಬಡ ಗೇಣಿದಾರರಿಗೆ ತೋರಿಸಿದರೆ ಅವರು ಅದನ್ನು ಬಿಟ್ಟು ಉಳಿದ ಭೂಮಿಯನ್ನು ತಂತಾನೇ ಉಳುಮೆ ಮಾಡಿಕೊಳ್ಳುತ್ತಾರೆ.

ಇಡೀ ಕರ್ನಾಟಕದಲ್ಲಿಯೇ ಒಬ್ಬ ಭೂಮಾಲೀಕನಿಗೆ ಇಷ್ಟು (ಎಕರೆ 1971-21 ಗುಂಟೆ) ಹೆಚ್ಚುವರಿ ಭೂಮಿ ಇರುವ ಇನ್ನೊಂದು ಪ್ರಕರಣ ಇಲ್ಲ. ಸರಕಾರ ಈ ಸಮಸ್ಯೆಯನ್ನು ತಕ್ಷಣ ಬಗೆಹರಿಸಬೇಕು, ಇಲ್ಲದಿದ್ದರೆ ಇಲ್ಲಿ ಸ್ಫೋಟಕ ವಾತಾವರಣ ನಿರ್ಮಾಣವಾಗುತ್ತದೆ.

ಮೇರಿ ಮ್ಯಾಗ್ಡಲಿನ್



ಕರುಣೆ ಅನುಕಂಪಗಳ ಅರಸುವೆನು ಮಾನಿನಿಗೆ
ಕಲ್ಲು ಜೆಲ್ಲಿಗಳ ತೂರಿ ಸಾಮೀಲಾದ ಕರಿಕತ್ತಲಿನಿರುಳು
ಭೋಗದ ಸುಳಿಹು ತಿಳುಹುವ
ಎದೆಗೆಟ್ಟವರು, ಕಾಡುಕೋಳಿಗಳು
ಅವರ ತಾತ್ಸಾರದ ತುಚ್ಛ ಬದುಕುಗಳಿಗೆ
ಪ್ರೇಮದ ಯಾತನೆಗಳಿಗೆ
ಅನುಕಂಪ ತೋರದೆ ನೆಮ್ಮದಿಗೊಡದೆ
ಅಮಲಿನಿಂದ ಉದುರಿಬಿದ್ದ ಆರಿವ್ ರೆಂಬೆಗಳಿಗೆ
ಹಾಲು ಬೆಳದಿಂಗಳಿಗೆ, ತೊಗಲು ರೂಬಿಗಳಿಗೆ
ಹುಣ್ಣಿಮೆಯ ಮುಸ್ಸಂಜೆ ಅವರ ಉಡುತೊಡುಗೆ
ವರ್ಷಧಾರೆಗೆ ರಜತ ರೆಂಬೆಗಳಿಗೆ
ಅವರ ಅನಿಷ್ಟ ನಗ್ನ ಪ್ರೇಮಗಳಿಗೆ
ಬೇಡುತ್ತೇನೆ ಮೇರಿ ಮ್ಯಾಗ್ಡಲೀನಳಿಗೆ
ದಯೆ ಅನುಕಂಪವನ್ನ.

ದೇಶಾಂಕ ಮ್ಯಾಗ್ಸಿಮೋವಿಚ್
(ಯುಗೋಸ್ಲಾವಿಯಾ ಕವಯಿತ್ರಿ 1898)

ಮೇರಿ ಮ್ಯಾಗ್ಡಲಿನ್ : ವ್ಯಭಿಚಾರ ಮಾಡಿದ್ದಕ್ಕೆ ಕ್ರೈಸ್ತ ಸಂಪ್ರದಾಯವಾದಿಗಳಿಂದ ಕಲ್ಲು ತೂರಿ ಕೊಲ್ಲಲ್ಪಟ್ಟ ಮಾನಿನಿ ಜೇಸಸ್ ಕ್ರೈಸ್ತನ ಅನುಯಾಯಿ. ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡವಳು.

ಭಾವಾನುವಾದ : **ಎಲ್ಹಿ. ನಾಗರಾಜು**

ವೆಂಕಟಸ್ವಾಮಿ ಆಯೋಗ
ಮೀಸಲಾತಿ ಪರಿಕಲ್ಪನೆ
ಒಂದು ಆಲೋಚನೆ

ಹಾಗಾದರೆ ಜಾತಿ ಪದ್ಧತಿಯನ್ನು ನಾಶಮಾಡುವುದಾದರೂ ಹೇಗೆ ? ಎಂದು ಲೋಹಿಯಾರವರ. ತಮ್ಮನ್ನು ತಾವೇ ಪ್ರಶ್ನಿಸಿಕೊಂಡಿದ್ದರು ; ಇದಕ್ಕಾಗಿ ಸ್ಪಷ್ಟವಾದ, ಮೂರ್ತ ಸ್ವರೂಪದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಇದರಲ್ಲಿ ಅತ್ಯಂತ ಪ್ರಮುಖವಾದ ಕಾರ್ಯಕ್ರಮವೆಂದರೆ ಜಾತಿಗಳ ಸಮೀಕರಣ ಸಾಧಿಸುವುದು. ಲೋಹಿಯಾವರು ಇದನ್ನು ಆಂತರಿಕ ಸಮೀಕರಣ ಎಂದು ವ್ಯಾಖ್ಯಾನಿಸಿದರು. ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಗಳಿಗೆ ಶೇ 80ರಷ್ಟು ಹುದ್ದೆಗಳನ್ನು, ಶಿಕ್ಷಣ, ಕೈಗಾರಿಕೆ ಹಾಗೂ ವ್ಯಾಪಾರಗಳಲ್ಲಿ ಮೀಸಲಿರಿಸುವುದರ ಮೂಲಕ ಜಾತಿಗಳ ಸಮೀಕರಣ ಸಾಧಿಸಬಹುದು. ಆಗ ಜಾತಿಗಳ ನಡುವೆಯಿರುವ ಮೇಲು ಕೀಳು ಎಂಬ ಭಾವನೆ ಹೋಗುತ್ತದೆ. ಜೊತೆಗೆ ಕೆಳಜಾತಿಗಳು ಮೈಚಳಿ ಬಿಟ್ಟು ಮೇಲ್ಜಾತಿಗಳೊಂದಿಗೆ ಯಾವುದೇ ಕೀಳರಿಮೆಯಿಲ್ಲದೆ, ಸಮಭಾವನೆಯಿಂದ ಬೆರೆಯಬಲ್ಲವು ; ಆಗ ಅಂತರ್ಜಾತೀಯ ಮದುವೆಗಳು ಹೆಚ್ಚಾಗಿ ಜಾತಿ ವಿನಾಶಕ್ಕೆ ನಾಂದಿಯಾಗುತ್ತದೆ ಎಂದು ವ್ಯಾಖ್ಯಾನಿಸಿದ್ದರು.

ಆದ್ದರಿಂದ ಜಾತಿ ವಿನಾಶದ ಕಾರ್ಯಕ್ರಮವಾಗಿ ಹಿಂದುಳಿದ ಜಾತಿಗಳಿಗೆ ಹಾಗೂ ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸುವ ಕ್ರಮ ರೂಪುಗೊಂಡಿತು. ಅಂದರೆ 'ಜಾತಿ' ಸಮಾಜದಲ್ಲಿ ಮೈಚಳಿ ಬಿಟ್ಟು ಭಾಗವಹಿಸಲಾರದಂತಹ ಜಾತಿಗಳಿಗೆ ವಿಶೇಷ ಆದ್ಯತೆ ಮತ್ತು ರಕ್ಷಣೆಯಿರಬೇಕೆಂಬ ಪರಿಕಲ್ಪನೆ ಇಂದು ವಿಪರೀತವಾಗಿ ವಿಕೃತಗೊಂಡಿದೆ, ತಿರುಚಲ್ಪಟ್ಟಿದೆ. ಯಾಕೆಂದರೆ ಇಂದು ವೆಂಕಟಸ್ವಾಮಿ ವರದಿಯನ್ನು ವಿರೋಧಿಸುತ್ತಿರುವವರು ; ಅಥವಾ ಜಾತಿ ಆಧಾರಿತ ಮೀಸಲಾತಿಯನ್ನು ವಿರೋಧಿಸುತ್ತಿರುವವರ ದೃಷ್ಟಿಯಲ್ಲಿ ಮೀಸಲಾತಿಯೆಂಬುದೇ ಬಡತನ ವಿರೋಧಿ ಕಾರ್ಯಕ್ರಮವಾಗಿದೆ. ಆದರೆ ಇವರು ಉದ್ದೇಶಪೂರ್ವಕವಾಗಿ ಮೀಸಲಾತಿಗೆ ಈ ಹೊಸ ಪರಿಕಲ್ಪನೆಯನ್ನು ಬೆರೆಸುತ್ತಿದ್ದಾರೆ. ಯಾಕೆಂದರೆ ಈ ಪರಿಕಲ್ಪನೆಯನ್ನು ಜನಪ್ರಿಯಗೊಳಿಸುವುದರೊಂದಿಗೆ ವಿಶೇಷ ರಕ್ಷಣೆ ಪಡೆಯುತ್ತ ಬಂದಿರುವ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಮೀಸಲಾತಿಯ ವಿರುದ್ಧ ಸಮಾಜದ ಎಲ್ಲ ವರ್ಗಗಳ ಬೆಂಬಲ ಪಡೆಯುವ ತಂತ್ರವಾಗಿದೆ.

ಈಗಾಗಲೇ ನಮಗೆ ಗೊತ್ತಿರುವಂತೆ ಸಾಮಾಜಿಕ ವಾಸ್ತವವಾದ ಜಾತಿಯೇ ಒಬ್ಬ ವ್ಯಕ್ತಿಯ ವಿಕಾಸ, ಅಥವಾ ನಿಷ್ಕ್ರಿಯತೆಗೆ ಕಾರಣವಾಗಿರಬೇಕಾದರೆ ಇಂತಹ ನಿಷ್ಕ್ರಿಯತೆಯನ್ನು ಮುರಿಯಲು ವಿಶೇಷ ರಕ್ಷಣೆಯನ್ನು ಕೆಳ ಜಾತಿಗೆ ಅಥವಾ ನಿಷ್ಕ್ರಿಯ ಜಾತಿಗೆ ಕೊಡಬೇಕಾಗಿರುವುದು ನ್ಯಾಯಯುತವಾದದ್ದು. ಆದರೆ ಚಲನಶೀಲತೆ ಹೊಂದಿರುವ ಅಥವಾ ಎಲ್ಲ ರಂಗಗಳಲ್ಲೂ ತನ್ನ "ಇರುವಿಕೆಯನ್ನು" ಸ್ಥಾಪಿಸಿಕೊಂಡಿರುವ ಜಾತಿಗೆ ವಿಶೇಷ ರಕ್ಷಣೆಯನ್ನು ಕೊಡುವ ಅವಶ್ಯಕತೆಯಾದರೂ ಏನು ? ಆದರೆ ಕರ್ನಾಟಕದಲ್ಲಿ ಲಿಂಗಾಯಿತರು ಹಾಗೂ ಒಕ್ಕಲಿಗರು ಕೇಳಹೊರಟಿರುವುದು ಇದನ್ನೆ. ಹಾವನೂರು ವರದಿಯೇ ಹೇಳುವಂತೆ ಒಂದು ಜಾತಿ ಅಥವಾ ವರ್ಗ ಹಿಂದುಳಿದಿರಬೇಕಾದರೆ ಆರ್ಥಿಕವಾಗಿ ಹಿಂದುಳಿದಿರುವಿಕೆ ಕಾರಣವಲ್ಲ, ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆ ಕಾರಣ. ಇದರ ಪರಿಣಾಮವೇ ಆರ್ಥಿಕ ಹಿಂದುಳಿದಿರುವಿಕೆ. ಅಂದರೆ ಜಾತಿಯ ನಿಷ್ಕ್ರಿಯತೆ.

ಹೀಗೆ ಜಾತಿ ನಿಷ್ಕ್ರಿಯಗೊಂಡಾಗ ಸರಕಾರದ ವಿವಿಧ ರೀತಿಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಾಗೂ ರಾಜಕಾರಣದಲ್ಲಿ ಪಾಲುಗೊಳ್ಳಲಾರದೆ ಇರುವ ಇಂತಹ ಜಾತಿಗಳಿಗೆ ವಿಶೇಷ ರಕ್ಷಣೆ ಕೊಡುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅರ್ಥಪೂರ್ಣ ಕಾರ್ಯಕ್ರಮವಾಗಿರುತ್ತದೆ. ಇಂತಹ ಜಾತಿಗಳು ತಮ್ಮ ವಿಶೇಷ ರಕ್ಷಣೆಗಾಗಿ ಹೋರಾಟ ನಡೆಸುವುದು ಪ್ರಜಾಪ್ರಭುತ್ವವಾದಿ ಚಳುವಳಿಯಾಗುತ್ತದೆ. ಈ ಚಳುವಳಿಯ ಸೈದ್ಧಾಂತಿಕ ನೆಲೆ ಮೇಲು ಜಾತಿಗಳೊಂದಿಗೆ ಸಮಾನತೆ ಸಾಧಿಸುವ ಮಹತ್ವಾಕಾಂಕ್ಷೆಯ ಮೇಲೆ ರೂಪುಗೊಂಡಿರುತ್ತದೆ. ಆದ್ದರಿಂದಲೇ ಇದನ್ನು ಒಂದು ರೀತಿಯ ಸಕಾರಾತ್ಮಕ ಜಾತಿವಾದ ಎಂದು ಕರೆಯುವುದು. ಸಕಾರಾತ್ಮಕ ಜಾತಿವಾದ ನಿಷ್ಕ್ರಿಯಗೊಂಡ ಜಾತಿಗಳ ಪಾಲಿಗೆ ಚಲನೆಯನ್ನು ತುಂಬುವ ಚಿಂತನೆ. ಆದ್ದರಿಂದಲೇ ಪ್ರಜಾಪ್ರಭುತ್ವವಾದ ಚಳುವಳಿಯ ಭಾಗವೂ ಹೌದು.

ಆದರೆ ಇಂದು ಒಕ್ಕಲಿಗರು ಹಾಗೂ ಲಿಂಗಾಯಿತರು. ಜಾತಿವಾದಿ ನೆಲೆಗಳ ಮೇಲೆ ಚಳುವಳಿ ಮಾಡುತ್ತ - ತಮ್ಮ ತಮ್ಮ ಜಾತಿಗಳಲ್ಲಿ ಎಷ್ಟೆಷ್ಟು ಬಡವರಿದ್ದಾರೆ ಎಂದು ಲೆಖ್ಖಾಚಾರ ಮಾಡಿ ಮೀಸಲಾತಿಯನ್ನು ಕೇಳಹೊರಟಿರುವುದು ಜಾತಿವಾದವಾಗುತ್ತದೆ. ಯಾಕೆಂದರೆ ಒಕ್ಕಲಿಗರಾಗಲಿ, ಲಿಂಗಾಯಿತರಾಗಲಿ ನಿಷ್ಕ್ರಿಯ ಜಾತಿಗಳಲ್ಲ. ಇವು ಚಲನೆಯನ್ನು ಹೊಂದಿರುವಂತಹ ಜಾತಿಗಳು. ಹಾವನೂರ್ ವರದಿ ಅಥವಾ ವೆಂಕಟಸ್ವಾಮಿ ವರದಿಯ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ, ಶೈಕ್ಷಣಿಕ ಹಿಂದುಳಿದಿರುವಿಕೆ ಕರ್ನಾಟಕ ಸರಕಾರದಲ್ಲಿ ಹುದ್ದೆಗಳಲ್ಲಿ ಪ್ರಾತಿನಿಧ್ಯತೆ ಮುಂತಾದವುಗಳನ್ನು ಪರಗಣಿಸಿದಾಗ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರು ನಿಷ್ಕ್ರಿಯ ಜಾತಿಗಳಲ್ಲ ಎಂದು ಸಾಬೀತಾಗುತ್ತದೆ. ಅಂದರೆ ವಿಶೇಷ ರಕ್ಷಣೆಯಿಲ್ಲದೆಯೇ ಇವು ಕರ್ನಾಟಕದ ರಾಜಕಾರಣ ಹಾಗೂ ಅಭಿವೃದ್ಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಪಾಲುಗೊಳ್ಳಬಲ್ಲವು.

ಇಂತಹ ಶಕ್ತಿಶಾಲಿ ಜಾತಿಗಳಿಗೆ ವಿಶೇಷ ರಕ್ಷಣೆಯ ಅವಶ್ಯಕತೆಯಾದರೂ ಯಾಕೆ ? ವಿಶೇಷ ರಕ್ಷಣೆ ಎಂಬುದು ಬಡತನ ವಿರೋಧಿ ಕಾರ್ಯಕ್ರಮವೆ ? ನಿಷ್ಕ್ರಿಯ ಜಾತಿಗಳಲ್ಲಿ ಸಮಾನತೆ, ಆತ್ಮಾಭಿಮಾನ ಮೂಡಿಸುವ ಕಾರ್ಯಕ್ರಮವೇ ಎಂಬುದನ್ನು ನಾವು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕಾಗಿದೆ. ಯಾಕೆಂದರೆ ಎಲ್ಲ ಜಾತಿಗಳಲ್ಲೂ ಸೃಷ್ಟಿಯಾಗಿರುವ ಬಡವರ್ಗ ಜಾತಿಪದ್ಧತಿಯ ಕಾರಣದಿಂದಲ್ಲ. ಇದು ನಮ್ಮ ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ. ಆದ್ದರಿಂದಲೇ ಮೇಲ್ಜಾತಿಗಳಲ್ಲಿ ಹಾಗೂ ಪ್ರಬಲ ಕೋಮುಗಳಲ್ಲಿರುವ ಬಡಜನರ ಸೃಷ್ಟಿಸುವ ಶಕ್ತಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿದೆ. ಹಾಗೆ ಹಿಂದುಳಿದ ಹಾಗೂ ದಲಿತ ಜಾತಿಗಳಲ್ಲಿ ಬಡತನಕ್ಕೆ ಕಾರಣ ಜಾತಿಪದ್ಧತಿ ಹಾಗೂ ಬಂಡವಾಳಶಾಹಿ ವ್ಯವಸ್ಥೆ; ಎರಡೂ ಒಂದೇ ದಾರಿ ದಾಳಿ ನಡೆಸುತ್ತವೆ. ಇದರಿಂದಾಗಿ ಕೆಳಜಾತಿಯವರು ಜಾತಿ ಆಧಾರಿತ ಸಂಘಟಿತರಾಗಿ ಮೀಸಲಾತಿ ಕೇಳುವುದಕ್ಕೂ ಮುಂದುವರೆದ ಜಾತಿಗಳು ಆಧಾರಿತ ಸಂಘಟಿತರಾಗಿ ಮೀಸಲಾತಿ ಕೇಳುವುದಕ್ಕೂ ಬಹಳ ವ್ಯತ್ಯಾಸವಿದೆ ಎಂಬುದು.

"ವೆಂಕಟಸ್ವಾಮಿ ವರದಿ" ವಿರೋಧ ಚಳವಳಿಯನ್ನು ಯಾವ ಬುದ್ಧಿಜೀವಿಗಳೂ ಪ್ರತಿಭಟಿಸಲಿಲ್ಲ ಏಕೆ?

ಇದಕ್ಕೆ ಬಹು ಮುಖ್ಯ ಕಾರಣವೊಂದಿದೆ. ಕರ್ನಾಟಕದ ಬುದ್ಧಿಜೀವಿ ವರ್ಗ ಬಹುಪಾಲು ಬ್ರಾಹ್ಮಣ, ಲಿಂಗಾಯಿತ ಹಾಗೂ ಒಕ್ಕಲಿಗ ಕೋಮುಗಳಿಂದಲೇ ಬಂದಿರುವುದರಿಂದ, ಇಂದು ಈ ಚಳವಳಿಯನ್ನು ಖಂಡಿಸದೆ ಪರೋಕ್ಷವಾಗಿ ಬೆಂಬಲಿಸುತ್ತಿದ್ದಾರೆ. ಕೃಷಿ ವಿ. ವಿ. ಯ ಉಪಕುಲಪತಿಯಾಗಿದ್ದ ದ್ವಾರಕನಾಥ್‌ರೊಬ್ಬರನ್ನು ಬಿಟ್ಟರೆ ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿರುವ ಕುರುಬ, ಬೇಡ, ಈಡಿಗ, ಬೆಸ್ತರಂಥ ಹಿಂದುಳಿದ ಜಾತಿಗಳಿಂದ ಒಬ್ಬ ಉಪಕುಲಪತಿಯಿರಲಿ, ಸಮಾಜದಲ್ಲಿ ಗುರ್ತಿಸಬಹುದಾದಂತ ಪ್ರೊಫೆಸರ್ ಹುದ್ದೆಗಳಿಂದ ಬಂದವರಲ್ಲ. ಇನ್ನೂ ಹಿಂದುಳಿದ ವರ್ಗಗಳಲ್ಲಿ ಅಲ್ಪಸಂಖ್ಯಾತರಾದಂತಹ ತಿಗಳ, ಉಪ್ಪಾರ, ಕುಂಬಾರ, ಅಗಸರಲ್ಲಿ ಒರಲು ಸಾಧ್ಯವೆ ? ಇವರು ಸಹ ಇಂದು ಪ್ರಬಲ ಕೋಮುಗಳ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಲು ಅಳುಕುತ್ತಿದ್ದಾರೆ. ಯಾಕೆಂದರೆ ಸಂಕುಚಿತವಾದಿಗಳೆಂದು, ಜಾತಿವಾದಿಗಳೆಂದು ಹಣೆಪಟ್ಟಿ ಹಚ್ಚಲು ಕರ್ನಾಟಕದ ಬಲಿಷ್ಠರು ತುದಿಗಾಲಲ್ಲಿ ನಿಂತಿದ್ದಾರೆ. ಆದ್ದರಿಂದ ರಾಜಕೀಯ ಪಕ್ಷಗಳಿಂದ ಬಂದಂತೆ ಬಂಗಾರಪ್ಪ, ಹಾವನೂರ್‌ರಂತವರು ವೆಂಕಟಸ್ವಾಮಿ ವರದಿಯನ್ನು ಕಟುವಾಗಿ ವಿರೋಧಿಸುತ್ತಿರುವುದು ;

ವೆಂಕಟಸ್ವಾಮಿ ವರದಿಯ ವಿರುದ್ಧ ನಡೆಯುತ್ತಿರುವ ಚಳುವಳಿ ಫ್ಯಾಸಿಸ್ಟ್ ಸ್ವರೂಪವನ್ನು ಪಡೆಯಿತು. ಜನಸಂಖ್ಯೆಯಿಂದ ಜಾಸ್ತಿಯಿರುವವರು ಸತ್ಯವನ್ನು 'ಸುಳ್ಳು' ಎಂದು ಹೇಳತೊಡಗಿದರೆ, ಸತ್ಯವು ಸಹ ಸುಳ್ಳಾಗಿ ಬಿಡುತ್ತದೆ. ದುರ್ಬಲರು ಅನಿವಾರ್ಯವಾಗಿ ಭಯದಿಂದ ಒಪ್ಪಿಗೊಳ್ಳಬೇಕಾಗುತ್ತದೆ. ಕರ್ನಾಟಕದಲ್ಲಿ ವೆಂಕಟಸ್ವಾಮಿ ವಿರೋಧಿ ಚಳುವಳಿಗಾರರು ಮಾಡಿದ್ದೂ ಇದನ್ನೆ.

ವೆಂಕಟಸ್ವಾಮಿ ವರದಿ ವೈಜ್ಞಾನಿಕವಾಗಿದೆಯೋ ಅಥವಾ ಇಲ್ಲವೆ ? ಎಂದು ಯಾಕೆ ಚರ್ಚಿಸಬಾರದಿತ್ತು. ಸತ್ಯವು ಸುಳ್ಳಿನ ನೆರಳಲ್ಲಿ ಸಾಯುವುದಕ್ಕಿಂತ ಮುಂಚೆ ನಾವು ಸತ್ಯವನ್ನು ಬದುಕಿಸಬೇಕಾಗಿತ್ತು. ದುರ್ಬಲ ವರ್ಗಗಳಿಗೆ ಆತ್ಮವಿಶ್ವಾಸ ತುಂಬಬೇಕಾಗಿತ್ತು. ಹಿಂದುಳಿದ ವರ್ಗಗಳ ಪ್ರಜಾಪ್ರಭುತ್ವವಾದಿ ಚಳವಳಿಯನ್ನು ಜಾತ್ಯಾತೀತ ಬುದ್ಧಿಜೀವಿ ವರ್ಗಗಳು ಗೌರವಿಸಬೇಕಿತ್ತು. ಇದೆಲ್ಲ ಆಗುವ ಮುಂಚೆಯೇ... ಹೆಗಡೆಯವರ ಚಾಣಾಕ್ಷ ರಾಜನೀತಿ ಹಾಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಕೋಟೆಗಳನ್ನುಳ್ಳ ಬಲಿಷ್ಠ ಜಾತಿಗಳ ಹೋರಾಟಗಳಿಂದಾಗಿ ವೆಂಕಟಸ್ವಾಮಿ ಆಯೋಗ ಮೂಲೆಗುಂಪಾಯಿತು.

ಜಾತಿವರ್ಗ ಮತ್ತು ಮೀಸಲಾತಿ

● ದರ್ಗಾ

ವೆಂಕಟಸ್ವಾಮಿ ಆಯೋಗದ ಹಿಂದುಳಿದ ವರ್ಗಗಳ ವರದಿ ವಿರುದ್ಧ ರಾಜ್ಯಾದ್ಯಂತ ವಿವಿಧ ಜಾತಿಗಳು ವಿರೋಧ ವ್ಯಕ್ತಪಡಿಸಿದವು. ತಮ್ಮ ತಮ್ಮ ಹಿಂದುಳಿಕೆಯನ್ನು ಪ್ರತಿಪಾದಿಸಲು ಶ್ರಮಿಸಿದವು. ವೈಜ್ಞಾನಿಕ ಎಂದು ಕರೆದ ಮುಖ್ಯಮಂತ್ರಿಗಳು ನಂತರ ಪ್ರಬಲ ಕೋಮಿನವರಾದ ಲಿಂಗಾಯತರು ಮತ್ತು ಗೌಡರ ಆಕ್ರೋಶಕ್ಕೆ ಮಣಿದು ವರದಿ ಕೈಬಿಟ್ಟರು.

ಲಿಂಗಾಯತರಾದ ಮಾಜಿ ಉಪರಾಷ್ಟ್ರಪತಿ ಬಿ. ಡಿ. ಜತ್ತಿ ಅವರು ಗೌಡರು ಮತ್ತು ಲಿಂಗಾಯಿತರು ಒಂದಾಗಿ ರಾಜ್ಯದಲ್ಲಿ ಬಲಿಷ್ಠ ರಾಜಕೀಯ ಶಕ್ತಿಯಾಗಿ ರೂಪಗೊಳ್ಳಬೇಕೆಂದು ಆಶಿಸಿದರು. ಆದರೆ ಮುಖ್ಯಮಂತ್ರಿಗಳು ತಮ್ಮದೇ ಆದ ಹೊಸ ಮೀಸಲಾತಿ ಸೂತ್ರದ ಮೂಲಕ ಲಿಂಗಾಯತರು ಮತ್ತು ಗೌಡರು ಒಟ್ಟಾಗಿ ಜಾತಿ ರಾಜಕೀಯ ಮಾಡದಂತೆ ನೋಡಿಕೊಂಡರು.

ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮೀಸಲಾತಿ ವಿಚಾರದಲ್ಲಿ ಜಾತಿಯನ್ನು ಮೈನಸ್ ಮಾಡಲು ನೋಡಿದರು. ಅನೇಕರಿಗೆ ಒಮ್ಮಿಂದೊಮ್ಮೆಲೆ ಹಳ್ಳಿ ಬಡವರ ಬಗ್ಗೆ ಕಾಳಜಿ ಶುರುವಾಯಿತು. ಬಡ ಬ್ರಾಹ್ಮಣರಿಗೆ ಏಕದಂ ವರ್ಗಪ್ರಜ್ಞೆ ಮೂಡಿತು. ಹೀಗೆ ಅನೇಕ ಅಘಟಿತ ಘಟನೆಗಳು ಸಂಭವಿಸಿದವು. ಆದರೆ ಮೀಸಲಾತಿ ಎಂಬುದು ಜನ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವ ಮಂತ್ರದುಂಗುರ ಅಲ್ಲ ಎಂಬ ವಿಚಾರ ಯಾರಿಗೂ ಹೊಳೆಯುತ್ತಿಲ್ಲ.

ಎಲ್ಲರ ಸಮಸ್ಯೆ ಪರಿಹಾರ ಮಾಡುವುದು ಮೀಸಲಾತಿಯ ಉದ್ದೇಶವಲ್ಲ. ಹುಟ್ಟಿನಿಂದ ಬರುವ ಕೀಳರಿಮೆ ಮತ್ತು ಆ ಜಾತಿಗಳಿಗೆ ಅಂಟಿಕೊಂಡಿರುವ ದಾರಿದ್ರ್ಯಕ್ಕೆ ಆಂತರಿಕ ಸಂಬಂಧವಿರುವುದರಿಂದ ದಾರಿದ್ರ್ಯವನ್ನು ಸ್ವಲ್ಪಮಟ್ಟಿಗಾದರೂ ಹೋಗಲಾಡಿಸುವುದರ ಮೂಲಕ ಮೂಲಭೂತವಾಗಿರುವ ಕೀಳರಿಮೆಯ ಬದಲು ಸ್ವಾಭಿಮಾನವನ್ನು ಚಿಗುರಿಸುವ ಸಾಧ್ಯತೆ ಇದೆ. ಇದು ಮೀಸಲಾತಿಯ ನಿಜವಾದ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನ ಜನರಿಗೆ ಮೀಸಲಾತಿ ಇರುವುದು ನ್ಯಾಯಬದ್ಧವಾಗಿದೆ. ಅದೇ ರೀತಿ ಆಯಾ ಪದ್ಧತಿಯ ಉತ್ಪಾದನಾ ವ್ಯವಸ್ಥೆಯಲ್ಲಿ ಬರುವ ಹಿಂದುಳಿದ ಜಾತಿಗಳ ಜನರಿಗೆ, ಜಾತಿ ಪದ್ಧತಿಯನ್ನು ಧಿಕ್ಕರಿಸಿ ಅಂತರ್‌ಜಾತಿ ಮದುವೆಯಾದವರಿಗೆ ಮತ್ತು ಬಡ ಅಲ್ಪ ಸಂಖ್ಯಾತರಿಗೆ ಜಾತಿಮೂಲವಾದ ಸಮಾಜದಲ್ಲಿ ಮಾನವ ಘನತೆಯೊಂದಿಗೆ ಬದುಕಲು ಸಹಾಯಕವಾಗುವಂತೆ ಮೀಸಲಾತಿ ನೀತಿಯನ್ನು ರೂಪಿಸಬೇಕಾಗಿದೆ.

ಮೀಸಲಾತಿ ಎಂಬುದು ವರ್ಗರೂಪದ ಬಡತನವನ್ನು ಕೊನೆಗಾಣಿಸುವ ಅಸ್ತ್ರವಲ್ಲ. ಅದು ವರ್ಗ ಹೋರಾಟದ ಮೂಲಕ ವರ್ಗರಹಿತ ಸಮಾಜ ಸ್ಥಾಪನೆಯಾದಾಗ ಮಾತ್ರ ಸಾಧ್ಯ. ವರ್ಗರೂಪಿ ಬಡತನ, ವರ್ಣರೂಪಿ ಬಡತನದ ಒಂದು ಭಾಗ ಮಾತ್ರ ಆಗಿರುತ್ತದೆ. ಅಂದರೆ ಕೆಳವರ್ಗದ. ಬ್ರಾಹ್ಮಣ, ಲಿಂಗಾಯಿತ, ಮತ್ತು ಗೌಡರು ಅಸ್ಪೃಶ್ಯರಂತೆ ಆರ್ಥಿಕ ಸಮಸ್ಯೆಗೆ ಖಂಡಿತ ಒಳಗಾಗಿರುತ್ತಾರೆ. ಆದರೆ ಮಾನಸಿಕ ನೋವಿಗೆ ಒಳಗಾಗಿರುವುದಿಲ್ಲ.

ಕ್ಷೌರಿಕ, ಕಮ್ಮಾರ, ಕುಂಬಾರ, ಅಗಸ, ಮುಂತಾದವರು ಜಾತಿಯ ಏಣಿಯಲ್ಲಿ ಕಟ್ಟ ಕಡೆಯ ಅಸ್ಪೃಶ್ಯರಿಗಿಂತಲೂ ಒಂದು ಮೆಟ್ಟಲು ಮೇಲೆ ಇದ್ದರೂ ಬ್ರಾಹ್ಮಣರು ಮತ್ತು ಜಮೀನ್ದಾರಿ ಜಾತಿಗಳಾದ ಗೌಡ, ಲಿಂಗಾಯಿತ ಮತ್ತು ಬಂಟರಿಗಿಂತ ಕೆಳಗಿರುತ್ತಾರೆ. ಆ ಕೆಳಗಿರುವಿಕೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ಇರುತ್ತದೆ. ಅಂಥವರಿಗೆ ಮತ್ತು ಅಂತರ ಜಾತಿಯ ಮದುವೆಯಾದವರಿಗೆ ಬಡ ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗಗಳಲ್ಲಿ ಅಗ್ರಸ್ಥಾನ ಕೊಡಲೇಬೇಕಾಗುವುದು. ಆದರೆ ಸುಲಿಗೆ ವರ್ಗದ ವ್ಯಾಪ್ತಿಗೆ ಬರುವ ಯಾವುದೇ ಜಾತಿಯ ವ್ಯಕ್ತಿಗೆ ಮೀಸಲಾತಿ ಸೌಲಭ್ಯವಿರಬಾರದು.

ಮೀಸಲಾತಿ ಎಂಬದು ಅರ್ಥಪೂರ್ಣವಾಗಬೇಕಾದರೆ ಈ ರೀತಿಯ ವಿಶ್ಲೇಷಣಾ ಪ್ರಜ್ಞೆ ಇರಲೇಬೇಕಾಗುತ್ತದೆ. ಹಾಗಾದರೆ ಬಡ ಬ್ರಾಹ್ಮಣರು, ಗೌಡರು ಮತ್ತು ಲಿಂಗಾಯಿತರು ಏನು ಮಾಡಬೇಕು ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ವರ್ಗ ಹೋರಾಟ ಒಂದೇ ಉತ್ತರ ಎಂದು ಈಗಾಗಲೇ ಹೇಳಿದ್ದರೂ ಅದರ ಮನವರಿಕೆಗಾಗಿ ಜಾತಿ ಮತ್ತು ಉದ್ಯೋಗದ ಸಂಬಂಧಗಳ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ.

ಜಾತಿ ಎಂಬುದು ಉದ್ಯೋಗದ ಸೃಷ್ಟಿಯಾಗಿದೆ. ಉದ್ಯೋಗವಿಲ್ಲದ ಜಾತಿಯಿಲ್ಲ. ನಮ್ಮ ಜಾತಿ ಪದ್ಧತಿಯ ಸಮಾಜ ವ್ಯವಸ್ಥೆಯಲ್ಲಿ ಹೊಲೆಯರಿಗೂ ಮಾದಿಗರಿಗೂ ಬೇರೆ ಬೇರೆ ಉದ್ಯೋಗಗಳಿದ್ದವು. (ಅವು ಈಗಲೂ ಅಲ್ಲಲ್ಲಿ ಉಳಿದುಕೊಂಡು ಬಂದಿವೆ) ಹೀಗೆ ಕಮ್ಮಾರ, ಕುಂಬಾರ, ಚಮ್ಮಾರ, ಬಡಿಗ, ಅಗಸ, ಕ್ಷೌರಿಕ ಮುಂತಾದ ಜಾತಿಯವರಿಗೆ ತಮ್ಮದೇ ಆದ ಉದ್ಯೋಗಗಳಿವೆ. ಹಿಂದೆ ಅವರು ಅದೇ ಉದ್ಯೋಗಗಳನ್ನು ಮಾಡಬೇಕಿತ್ತು. ಅವರು ಬೇರೆ ಉದ್ಯೋಗಗಳನ್ನು ಆರಿಸಿಕೊಳ್ಳುವಂಥ ವಾತಾವರಣ ಸೃಷ್ಟಿಯಾಗತೊಡಗಿದ್ದು ವಸಾಹತುಶಾಹಿ ಉತ್ಪಾದನಾ ಪದ್ಧತಿ ಬೆಳೆದಾಗ ಮಾತ್ರ.

ಬಂಡವಾಳಶಾಹಿ ಉತ್ಪಾದನಾ ಪದ್ಧತಿಯಲ್ಲಿ ಜಾತಿ ಮತ್ತು ಉದ್ಯೋಗಕ್ಕೆ ಅನನ್ಯ ಸಂಬಂಧವಿರುವುದಿಲ್ಲ. ಆದರೆ ಅನೇಕ ಹೊಲೆಯರು, ಮಾದಿಗರು, ಕ್ಷೌರಿಕರು, ಚಮ್ಮಾರರು ಇಂದು ಬೇರೆ ಉದ್ಯೋಗಗಳಲ್ಲಿ ತೊಡಗಿದ್ದರೂ ಅವರ ಜಾತಿಯನ್ನು ಅವರ ಪೂರ್ವಜರ ಉದ್ಯೋಗದಿಂದಲೇ ಪರಿಗಣಿಸಲಾಗುತ್ತದೆ. ಏಕೆಂದರೆ ಶುದ್ಧ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜಾತಿಯ ಸೃಷ್ಟಿಯಾಗುವುದಿಲ್ಲ. ಭಾರತದಲ್ಲಿ ಮುಖ್ಯವಾಗಿ ಬಂಡವಾಳಶಾಹಿ ವ್ಯವಸ್ಥೆ ಇದ್ದರೂ ಸಹಸ್ರಾರು ವರ್ಷಗಳಿಂದ ಬಂದಂತ ಏಷ್ಯಾ ಉತ್ಪಾದನಾ ಪದ್ಧತಿ ಇಂದಿಗೂ ಹಳ್ಳಿಗಾಡಿನಲ್ಲಿ ಅರೆಜೀವದಿಂದ ಬದುಕುತ್ತಿದೆ ಅದು ಸೃಷ್ಟಿಸಿದ ಜಾತಿಪದ್ಧತಿ ಸಾಂಸ್ಕೃತಿಕ ಮತ್ತು ಸಾಮಾಜಿಕ ರೂಪದಲ್ಲಿ ಇಂದಿಗೂ ಜೀವಂತವಾಗಿದೆ.

ಅಂತೆಯೇ ಜಾತಿ ಪದ್ಧತಿ ಇರುವವರೆಗೆ ಮೀಸಲಾತಿ ಇರಲೇಬೇಕು. ಮೀಸಲಾತಿಯ ಚಾಪೆ ಕೆಳಗೆ ನುಸುಳಿಕೊಳ್ಳಬಯಸುವ ಬಡಬ್ರಾಹ್ಮಣರು ಮುಂತಾದವರು ಮೀಸಲಾತಿಯ ಇತಿಮಿತಿಗಳನ್ನು ಅರಿತುಕೊಳ್ಳಬೇಕು. ಮೀಸಲಾತಿ ಹೆಚ್ಚಿಸುವುದರಿಂದ ತಮ್ಮ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದಿಲ್ಲ ಎಂಬುದನ್ನು ಗಮನಿಸಬೇಕು. ಮೀಸಲಾತಿಯ ಮೂಲಕ ಸರ್ಕಾರ ಎಲ್ಲಾ ಜಾತಿಯ ಬಡವರಿಗೆ ಉದ್ಯೋಗ ಕೊಡುವ ಸಾಮರ್ಥ್ಯ ಹೊಂದಿದೆ ಎಂಬುದು ಒಂದು ಭ್ರಮೆಯಾಗಿದೆ. ಜನರು ಸುಲಿಗೆ ವ್ಯವಸ್ಥೆಯ ಕ್ರೌರ್ಯವನ್ನು ಅರಿತುಕೊಳ್ಳಬಾರದೆಂದು ಸರ್ಕಾರ ಪರೋಕ್ಷವಾಗಿ ಇಂಥ ಭ್ರಮೆಗಳನ್ನು ಸೃಷ್ಟಿಸುತ್ತಲೇ ಇರುತ್ತದೆ. ಅದಕ್ಕೆ ಮರುಳಾಗದೆ ಮೇಲ್ಜಾತಿ ಬಡವರು ವರ್ಗಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

ಬಂಡವಾಳಶಾಹಿ ವ್ಯವಸ್ಥೆ ವಿರುದ್ಧ ನಿರಂತರ ಹೋರಾಟ ಮಾಡುವುದರ ಮೂಲಕ ಮಾತ್ರ ಹೊಸ ಜೀವನ ಪಡೆಯಲು ಸಾಧ್ಯ. ಅದಕ್ಕಾಗಿ ಜಾತಿ ವ್ಯವಸ್ಥೆಯ ನಿರ್ನಾಮ ಮತ್ತು ಎಲ್ಲ ಕೆಳವರ್ಗದ ಜನರ ಧೃವೀಕರಣಕ್ಕಾಗಿ ಏಕಕಾಲಕ್ಕೆ ಪ್ರಯತ್ನಗಳು ಸಾಗಬೇಕು.

ತಟ್ಟನೆ ಹೊಳೆದ ಒಂದು ಕಥೆ

ಒಂದಾನೊಂದು ಕಾಲದಲ್ಲಿ ಒಂದು ಊರಿನ ಒಬ್ಬ ಗುಹ್ಯರೋಗದ ಮಹಿಳೆಗೆ ಒಂದು ಗಂಡು ಮಗು ಹುಟ್ಟಿತು. ಅದಕ್ಕೆ ಸತ್ಯಕಾಮ ಎಂದು ಹೆಸರಿಡಲಾಯಿತು. ಸತ್ಯಕಾಮ ದೊಡ್ಡವನಾದ. ತನಗೂ ಗುಹ್ಯರೋಗ ಇದೆ ಎಂಬುದನ್ನು ಅರಿತುಕೊಂಡ. ಯಾವ ತಪ್ಪೂ ಮಾಡದೆ ಗುಹ್ಯರೋಗಕ್ಕೆ ಬಲಿಯಾದದ್ದರ ಬಗ್ಗೆ ಆತನಿಗೆ ಬಹಳ ಬೇಸರವಾಯಿತು. ಸಮಾಜದ ಎಲ್ಲ ಜ್ಞಾನಿಗಳಿಗೂ ಆತ ಎರಡು ಪ್ರಶ್ನೆ ಕೇಳತೊಡಗಿದ. "ನಾನು ಯಾವ ತಪ್ಪು ಮಾಡಿಲ್ಲ ನನಗೇಕೆ ಗುಹ್ಯರೋಗ?", "ಇದಕ್ಕೆ ಯಾರನ್ನು ಶಿಕ್ಷಿಸಲಿ ?" ಇವು ಆತನ ಪ್ರಶ್ನೆಗಳಾಗಿದ್ದವು.

ಸಮಾಜದ ಮಹಾಜ್ಞಾನಿಗಳಾದ ವೇದಪಂಡಿತರು, ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು, ಮನೋವಿಜ್ಞಾನಿಗಳು ಯುದ್ಧ ನಿಪುಣರು ಹೀಗೆ ಆ ಸುಲಿಗೆ ಸಮಾಜದ ಎಲ್ಲ ಪ್ರಮುಖರು ಆ ಪ್ರಶ್ನೆಗಳಿಗೆ ಉತ್ತರಿಸದೆ ಮೌನವಾಗುತ್ತಾರೆ. ಆದರೆ ಪ್ರತಿಯೊಬ್ಬರೂ ಆತ ತಮ್ಮ ಮಗ ಎಂದು ಭಾವಿಸುತ್ತಾರೆ. ಸತ್ಯಕಾಮನಿಗೆ ಇದೆಲ್ಲದರ ಅರ್ಥವಾಗುತ್ತದೆ. ಒಬ್ಬ ವ್ಯಕ್ತಿಯಿಂದ ಇವರನ್ನೆಲ್ಲ ಶಿಕ್ಷಿಸಲು ಸಾಧ್ಯವಿಲ್ಲ ಎಂದು ಅರಿತುಕೊಂಡ ಆತ ಸಮಾಜದ ಎಲ್ಲ ಸತ್ಯಕಾಮರ ಸಂಘಟನೆಗೆ ತೊಡಗುತ್ತಾನೆ.

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ

ಅನು: ಗಂಗಾಧರಮೂರ್ತಿ

ಸಾಮಾನ್ಯ ತಿಳುವಳಿಕೆಯಂತೆ ಪ್ರಪಂಚದ ಇತರ ಧರ್ಮಗಳಲ್ಲಿ ಕಾಣದಂತಹ ಪರಧರ್ಮ ಸಹಿಷ್ಣುತೆಯು ಹಿಂದೂ ಧರ್ಮದಲ್ಲಿ ಮಾತ್ರ ಕಂಡುಬರುತ್ತದೆ ಎನ್ನುವ ಮಾತು ಸತ್ಯಕ್ಕೆ ದೂರವಾದದ್ದು. ನಮ್ಮ ಹಿಂದಿನ ಪೀಳಿಗೆಯ ಪ್ರತಿಭಾನ್ವಿತ ವಿಜ್ಞಾನಿ ಪ್ರಫುಲ್ಲಚಂದ್ರರೇ ಈ ಬಗ್ಗೆ ಹೇಳಿದ್ದು ಸೂಕ್ತವಾಗಿದೆ. "ಹಿಂದೂ ಧರ್ಮವು ಪರಧರ್ಮ ಸಹಿಷ್ಣು ಮತ್ತು ದಿಗ್ಬಂಧನ ರಹಿತವಾದದ್ದು ಎನ್ನುವ ವಿಚಾರ ಅರ್ಥಹೀನ. ಅಭ್ಯಾಸದಲ್ಲಿ ಅದು ಕಠೋರ, ಕ್ರೂರ, ಮತ್ತು ಅಸಹ್ಯ.(12) ಅದು ಹೇಗೆ ಕಠೋರ, ಕ್ರೂರ ಮತ್ತು ಅಸಹ್ಯ ಎನ್ನುವುದಕ್ಕೆ ವೇಮನನ ಕೊಲೆ, ಶಂಭೂಕನ ಶಿರಚ್ಛೇದ ಮತ್ತು ಚಾರ್ವಾಕನಿಗೆ ವಿಧಿಸಿದ ಚಿತ್ರಹಿಂಸೆಗಳು ಸಾಕ್ಷಿಯಾಗಿವೆ. ವೇದಗಳ ಸತ್ಯತೆಯನ್ನು ಹಾಗೂ ವೈದಿಕ ವಿಧಿಗಳ ಸಫಲತೆಯನ್ನು ಪ್ರಶ್ನಿಸಿದ್ದೇ ಇವರ ಅಪರಾಧವಾಗಿತ್ತು. ಈ ಸಂದರ್ಭಗಳು ಕೇವಲ ಪೌರಾಣಿಕ, ಐತಿಹಾಸಿಕವಲ್ಲ ಎಂದು ಹಿಂದೂಧರ್ಮದ ಸಮರ್ಥನೆ ಮಾಡುವವರು ತಮ್ಮ ಉದ್ದಿಶ್ಯಕ್ಕೆ ಅನುಗುಣವಾಗಿ ವಾದ ಮಾಡುವ ಒಂದು ತಂತ್ರವನ್ನು ಅಭ್ಯಸಿಸಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮೇಲಿನ ಈ ಮೂರೂ ಸಂದರ್ಭಗಳನ್ನು ಪುರಾಣ ಕಲ್ಪನೆ ಎಂದು ನಿರಾಕರಿಸಿದರೂ ಅವೈದಿಕ ನಂಬಿಕೆಗಳನ್ನೂ, ಅವುಗಳ ಪೋಷಕರನ್ನೂ ಹಿಂಸಾತ್ಮಕವಾಗಿ ನಿರ್ನಾಮ ಮಾಡಿರುವ ಇನ್ನಿತರ ಉದಾಹರಣೆಗಳು ಇತಿಹಾಸದ ಭಾಗಗಳಾಗಿವೆ. ಅವುಗಳಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು.

ಅಶೋಕನು ನಿರ್ಧಾರಪೂರ್ವಕವಾಗಿ ಅಶ್ವಮೇಧವನ್ನು ಕೈಬಟ್ಟದ್ದು ಸರಿಯಷ್ಟೆ. ಅವನ ಉತ್ತರಾಧಿಕಾರಿಯಾದ ಬೃಹದ್ರಥನ ದಂಡನಾಯಕನೂ ಮೌರ್ಯ ಚಕ್ರಾಧಿಪತ್ಯವನ್ನು ವಶಪಡಿಸಿಕೊಂಡವನೂ ಆದ ಪುಷ್ಯಮಿತ್ರನು ಅವನನ್ನು ಕೊಂದು, ಅಶೋಕನಿಂದ ನಿಲುಗಡೆಯನ್ನು ತಲುಪಿದ್ದ ಅಶ್ವಮೇಧವನ್ನು ಪುನರುಜ್ಜೀವನಗೊಳಿಸಿದ. (13) ಬೌದ್ಧಾನುಯಾಯಿಯಾದ ಕಾನಿಷ್ಕ ಚಕ್ರವರ್ತಿಯನ್ನು "ಹಾಸಿಗೆಯಲ್ಲೆ...... ಅವನ ಹೊದಿಕೆಯಿಂದಲೇ ಕೊಲೆಮಾಡಲಾಯಿತು. (14) ಚಾಲುಕ್ಯರ ಮೊದಲನೆ ಪುಲಿಕೇಶಿಯು "ಅಮರಾವತಿಯ ಬೌದ್ಧ ವಿಹಾರಗಳನ್ನು ನೆಲಸಮ ಮಾಡಿ, ಈ ಪ್ರದೇಶಗಳಲ್ಲೆ ಬೌದ್ಧ ಧರ್ಮವನ್ನು ನಿರ್ನಾಮ ಮಾಡಿದ". (15)

ಆದಿ ಶಂಕರಾಚಾರ್ಯರ ನೇರ ಮೇಲ್ವಿಚಾರಣೆಯಲ್ಲಿ ನಡೆದ ಹಲ್ಲೆಯ ಪರಿಣಾಮವಾಗಿ ನಾಗಾರ್ಜುನಕೊಂಡ ಕೂಡಾ ನೆಲಸಮವಾದದ್ದು ಹೀಗೆಯೇ. ಈ ಪ್ರದೇಶದಲ್ಲೆ ಅನ್ವೇಷಣೆಯನ್ನು ಪ್ರಥಮವಾಗಿ ಕೈಕೊಂಡ ಲಾಗರ್ಸ್ಟನ ವರದಿ ಹೀಗಿದೆ : "ಸ್ಥಳ ಪುರಾಣವು ಹೇಳುವಂತೆ, ಮಧ್ಯಯುಗದಲ್ಲಿದ್ದ ಹಿಂದೂ ಧರ್ಮದ ಆಚಾರ್ಯ ಪುರುಷನೂ, ತತ್ವಜ್ಞಾನಿಯೂ ಆದ ಶಂಕರಾಚಾರ್ಯರು ಶಿಷ್ಯಸಮೂಹದೊಂದಿಗೆ ನಾಗಾರ್ಜುನಕೊಂಡಕ್ಕೆ ಬಂದು ಬೌದ್ಧ ವಿಹಾರಗಳನ್ನು ನಾಶಪಡಿಸಿದರು".

ಹಿಂದೂ ಧರ್ಮದಲ್ಲಿ ಇತರ ಧರ್ಮಗಳಲ್ಲಿ ಕಾಣದಂತಹ ಪರ ಧರ್ಮ ಸಹಿಷ್ಣುತೆ ಇದೆ ಎನ್ನುತ್ತಾರೆ. ಆದರೆ ವೈದಿಕ ಧರ್ಮ ವಿರೋಧಿ ನಂಬಿಕೆಗಳನ್ನು, ಅವುಗಳ ಪೋಷಕರನ್ನು ಹಿಂಸಾತ್ಮಕವಾಗಿ ನಿರ್ನಾಮ ಮಾಡಲಾದ ಉದಾಹರಣೆಗಳಿವೆ.

ಬೌದ್ಧ ಧರ್ಮದ ಅನುಯಾಯಿಯಾದ ಕಾನಿಷ್ಕನನ್ನು ಆತನ ಹಾಸಿಗೆಯಲ್ಲೇ ಕೊಲೆ ಮಾಡಲಾಯಿತು. ಆದಿ ಶಂಕರಾಚಾರ್ಯ ತನ್ನ ನೇರ ಉಸ್ತುವಾರಿಯಲ್ಲಿ ನಾಗಾರ್ಜುನ ಕೊಂಡದ ಬೌದ್ಧ ವಿಹಾರಗಳನ್ನು ನಿರ್ನಾಮ ಮಾಡಿದ.

ಈ ಕಣಿವೆಯಲ್ಲಿ ಅಲ್ಲಲ್ಲೆ ನಿಂತಿರುವ ಪಾಳುಗೋಡೆಗಳ ಸುತ್ತಮುತ್ತಲ ಬೇಸಾಯದ ಭೂಮಿಯು ಶಂಕರಾಚಾರ್ಯರು ಪಡೆದ ಧರ್ಮ ದತ್ತಿಯನ್ನು ಈಗಲೂ ಪ್ರತಿನಿಧಿಸುತ್ತದೆ. ಶಂಕರಮಠಕ್ಕೆ ಸೇರಿದ ಸದ್ಯದ ಮಠಾಧೀಶರು, ನನ್ನ ಈ ಅನ್ವೇಷಣೆಗೆ ಅನುಮತಿ ನೀಡಿದ್ದಾರೆ. ಗುಂಟೂರು ಜಿಲ್ಲೆಯ ಪುಷ್ಪಗಿರಿಯಲ್ಲಿ ವಾಸವಾಗಿರುವ ಈ ಪುರೋಹಿತ ಮೂಲದಲ್ಲೆ ಬೌದ್ಧ ಕ್ಷೇತ್ರವಾಗಿರಬಹುದಾದ ನಲ್ಲಮಲ ಪ್ರದೇಶದ ಶ್ರೀಶೈಲಂ ದೇವಾಲಯವನ್ನು ಇದೇ ರೀತಿಯಲ್ಲಿ ವಶಪಡಿಸಿಕೊಂಡಿರುವುದು ಕಂಡುಬರುತ್ತದೆ. (16)

ಕೇವಲ ಬೌದ್ಧ ಧರ್ಮಾವಲಂಬಿಗಳನ್ನು ಮಾತ್ರವೇ ವೇದಾಂತಿಗಳು ಹೀಗೆ ನಿರ್ದಯರಾಗಿ ತುಳಿದುಹಾಕಿದರು ಎನ್ನುವಂತಿಲ್ಲ. ಬುದ್ಧ ಮತ್ತು ಮಹಾವೀರರ ಸಮಕಾಲೀನರಾದ ಅಲೆಮಾರಿ ಭಿಕ್ಷುಗಳು ಅಕ್ಷರಶಃ ನೂರಾರು ಸಂಖ್ಯೆಯಲ್ಲಿದ್ದರು. ಇವರೆಲ್ಲರೂ ಪ್ರಬಲವೂ, ದುರ್ಬಲವೂ ಆದ ವಿವಿಧ ದೃಷ್ಟಿಕೋನಗಳನ್ನು ಒಳಗೊಂಡ ತಮ್ಮದೇ ತತ್ವ ವಿಚಾರಗಳನ್ನು ಹೊಂದಿದ್ದರು. ಮಕ್ಕಳಿಗೋಸಲ, ಪುರಾಣಕಸ್ಸಪ, ಅಜಿತಕೇಸಕಾಂಬಲೆ, ಪಕುದ ಕಚ್ಚಾಯನ, ಸಂಜಯ, ಬೆಲ್ಲತ್ತಿಪುತ್ತ ಮತ್ತು ನಿಗಂತನಾಥಪುತ್ತ ಇವರುಗಳು ರೀಪೆ ಹೇಳುವ ಪ್ರಧಾನ ಬಂಡುಕೋರಬೋಧಕರು.

ಬೌದ್ಧ ಮತ್ತು ಜೈನ ಗ್ರಂಥಗಳಲ್ಲೇ ಈ ಹೆಸರುಗಳು ನಮಗೆ ಕಂಡುಬರುತ್ತವೆ. ಪರಂಪರೆಯಲ್ಲಿ ತಿಳಿದುಬರುವಂತೆ ಲೋಕಾಯತವು ಅತ್ಯಂತ ಪ್ರಾಚೀನ ಮತ್ತು ಎದೆಗಾರಿಕೆಯ ಭೌತವಾದೀ ಚಿಂತನೆ. ಅದರ ಸ್ಥಾಪಕನಾದ ಬೃಹಸ್ಪತಿ "ಬುದ್ಧಿ ಪೌರುಷಗಳಿಲ್ಲದವರು ಜೀವನ ಸಾಗಿಸುವ ಸಲುವಾಗಿ ವೇದಗಳನ್ನು ಆಶ್ರಯಿಸುತ್ತಾರೆ" * (19) ಎಂದು ಆದರ್ಶವಾದೀ ಸಿದ್ಧಾಂತವನ್ನು ಟೀಕಿಸುವುದು ಕಂಡುಬರುತ್ತದೆ. ಲೋಕಾಯತರನ್ನು ಚಾರ್ವಾಕರೆಂದೂ ಹೇಳಲಾಗಿದೆ. ಡಿ. ಶಾಸ್ತ್ರಿ ಹೇಳುವಂತೆ "ಮಹಾಭಾರತದಲ್ಲಿ ಚಾರ್ವಾಕರನ್ನು ಕಾಣುತ್ತೇವೆ. ಈ ಪದದ ಮೂಲಕವೇ ನಂತರದಲ್ಲಿ ಕೂಡ ಭಾರತೀಯ ಭೌತವಾದವನ್ನು ನಾವು ಹೆಸರಿಸುತ್ತೇವೆ. ಸಾಮಾನ್ಯವಾಗಿ "ಚಾರು" (ಸುಂದರವಾದ) "ವಾಕ್" (ಮಾತು) ಎಂಬ ಅರ್ಥದಿಂದ ಚಾರ್ವಾಕ ಎಂಬ ಪದವನ್ನು ಪರಿಗಣಿಸುತ್ತೇವೆ ಬೃಹಸ್ಪತಿಗೆ "ಚಾರು" ಎನ್ನುವುದು ಸಮಾನಾರ್ಥಕವಾಗಿರುವುದು ನಮ್ಮ ಆಸಕ್ತಿಯನ್ನು ಕೆರಳಿಸುತ್ತದೆ".

ಆದ್ದರಿಂದ ಚಾರ್ವಾಕ ಎನ್ನುವ ಪದವು 'ಬೃಹಸ್ಪತಿಯ ಮಾತುಗಳು' ಎನ್ನುವ ಅರ್ಥವ್ಯಾಪ್ತಿಯುಳ್ಳದ್ದು ಎನ್ನಬಹುದು. (20) ಚಾರು ಎನ್ನುವುದು ಬೃಹಸ್ಪತಿಗಿದ್ದ ಇನ್ನೊಂದು ಹೆಸರಿರಬಹುದೇನೋ ! ಆದರೆ ಭೌತವಾದಿಗಳನ್ನೂ, ನಿರೀಶ್ವರವಾದಿ(ಪಾಷಂಡಿ)ಗಳನ್ನೂ ಅತ್ಯಂತ ನಿರ್ದಯವಾಗಿ ಹೇಗೆ ನಾಶಪಡಿಸಿದರು; ಹಾಗೂ ಸಾಂಖ್ಯ, ನ್ಯಾಯ ಮತ್ತು ವೈಶೇಷಿಕ ತತ್ವ ಪ್ರಕಾರಗಳು ಹಿಂದಣ ಬಾಗಿಲಿಂದ ಕಳ್ಳಸಾಗಾಣಿಕೆಯಲ್ಲಿ ದೇವರುಗಳನ್ನು ತಮ್ಮ ಮನೆಯೊಳಕ್ಕೆ ಬರಮಾಡಿಕೊಂಡವು ಎನ್ನುವ ಸಂಗತಿ ಸಂದೇಹಾತೀತವಾದದ್ದು.

ವೈಯಕ್ತಿಕವಾಗಿ, ನಾನು ಭೌತವಾದಿಯಾದರೂ ಇಲ್ಲಿ ಆದರ್ಶವಾದ ಅಥವಾ ಭೌತವಾದಗಳಲ್ಲಿನ

ಸಾಪೇಕ್ಷ ಶ್ರೇಷ್ಠತೆಯನ್ನು ಕುರಿತು ಚರ್ಚಿಸುವುದು ನನ್ನ ಉದ್ದೇಶವಲ್ಲ. ನಾನು ಒತ್ತಿಹೇಳಬಯಸುವ ಅಂಶವೆಂದರೆ ಎಲ್ಲ ರೀತಿಯ ತತ್ವ ಚಿಂತನೆಗೂ ಹಿಂದೂ ಧರ್ಮವು ಅನಿಯಂತ್ರಿತ ಸ್ವತಂತ್ರವನ್ನು ಕೊಟ್ಟಿತ್ತು ಎನ್ನುವ ಹೇಳಿಕೆ ಸತ್ಯಕ್ಕೆ ದೂರ ಎಂಬುದು ಹಿಂದೂ ಧರ್ಮದಲ್ಲಿ ಸಾರ ಸಂಗ್ರಹತ್ವಕ್ಕೂ ಸಮನ್ವಯತೆಗೂ ಅವಕಾಶವಿದೆ ಎನ್ನುವುದು ಸುಳ್ಳಲ್ಲ.

ಆದರೆ ಎಲ್ಲಿಯವರೆಗೆ ಧರ್ಮದ ಮೂಲ ನೆಲೆಗಳನ್ನು ನಾವು ಪ್ರಶ್ನಿಸುವುದಿಲ್ಲವೋ ಅಲ್ಲಿಯವರೆಗೆ ಮಾತ್ರ ಇಂತಹ ವಿಶಾಲ ಭಾವನೆಗೆ ಅವಕಾಶವಿತ್ತು. ಹಿಂದೂಧರ್ಮದ ಪ್ರಮುಖ ಮೂಲ ನೆಲೆಗಳು ಯಾವುವು ? ಮೊದಲನೆಯದು : ದೈವಿಕ ಸತ್ಯಗಳ ಜ್ಞಾನಭಂಡಾರವಾಗಿ ವೇದಾಧಿಕಾರವನ್ನು ಒಪ್ಪಿಕೊಳ್ಳುವುದು; ಎರಡನೆಯದು : ಭಾರತೀಯವಾಗಿರಲಿ, ಪಾಶ್ಚಾತ್ಯವಾಗಿರಲಿ ಸತ್ಯಪ್ರಮಾಣವೂ ಶ್ರೇಷ್ಠ ತತ್ವಜ್ಞಾನವೂ ಆದ ವೇದಾಂತಕ್ಕೆ ಸರಿಸಮನಾದ ಯಾವ ಗ್ರಂಥವೂ ಇಲ್ಲ ಎನ್ನುವುದು; ಮೂರನೆಯದು : ಭೌತಿಕ ಪ್ರಪಂಚವು ಒಂದು ಭ್ರಮೆ ಮತ್ತು ಏಕಮಾತ್ರ ಸತ್ಯವೆಂದರೆ ಆತ್ಮ ಎನ್ನುವುದು. ನಾಲ್ಕನೆಯದು : ಜೀವಾತ್ಮವು ಪರಮಾತ್ಮನಲ್ಲಿ ಲೀನವಾಗಬೇಕಾಗಿರುವುದರಿಂದ ಹುಟ್ಟು-ಸಾವುಗಳ ಚಕ್ರದಿಂದ ತಪ್ಪಿಸಿಕೊಳ್ಳಲು ನಿರಂತರ ಸಾಧನೆಯಲ್ಲಿ ತೊಡಗಬೇಕು ಎಂಬುದು. ಐದನೆಯದು : ಅಸಮಾನತೆಯು ಪ್ರಕೃತಿಯ ಸಹಜ ನಿಯಮ.

ಪೂರ್ವ ಜನ್ಮದಲ್ಲಿನ ನಮ್ಮ ಕರ್ಮಗಳು ಈ ಜನ್ಮದಲ್ಲಿ ನಮ್ಮ ಸ್ಥಿತಿಗತಿಗಳನ್ನು, ಸುಖ ದುಃಖಗಳು ಮತ್ತು ಸಮಸ್ತವನ್ನು ನಿರ್ಣಯಿಸುತ್ತವೆ ಎಂಬುದು; ಆರನೆಯದು : ವರ್ಣಾಶ್ರಮಧರ್ಮವನ್ನು ಆಧರಿಸಿದ ಧರ್ಮದತ್ತ ಸನಾತನ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವುದು ಅಥವಾ ಶಿಥಿಲಗೊಳಿಸುವುದು ಎಂದರೆ ಜಗತ್ತನ್ನು ವಿನಾಶದ ಅಂಚಿಗೊಯ್ಯುವ ಕಿಡಿಗೇಡಿ ಪ್ರಯತ್ನ ಎನ್ನುವುದು. ಈ ಪಟ್ಟಿಯನ್ನು ಎಷ್ಟು ಬೇಕಾದರೂ ಬೆಳೆಸಲು ಸಾಧ್ಯವಿದ್ದರೂ ಮೊಟಕುಗೊಳಿಸಲು ಯತ್ನಿಸುತ್ತೇನೆ. ತೀರಾ ಸೋಜಿಗದ ಸಂಗತಿಯೆಂದರೆ ಈ ನಿಯಮಗಳಾವುವೂ ಕೂಡ ಅತ್ಯಂತ ಪ್ರಾಚೀನವಾದ ಋಗ್ವೇದದಲ್ಲಿ ಕಂಡುಬರುವುದಿಲ್ಲ.

ವೇದಾಂತಿಗಳು ನಮ್ಮನ್ನು ನಂಬಿಸಲು ಪ್ರಯತ್ನಿಸುವುದಕ್ಕೆ ತದ್ವಿರುದ್ಧವಾಗಿ ಋಗ್ವೇದವು ಪರದ ಬದುಕಿಗಿಂತ ಇಹದ ಬದುಕಿಗೇ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತದೆ. ಕೆ. ಎಸ್. ಮೂರ್ತಿ ಹೇಳುವಂತೆ, "ಧ್ಯಾಸ್(ಸ್ವರ್ಗ-ಆಕಾಶ) ಒಂದನ್ನೇ ಕುರಿತಂತೆ ಯಾವ ಋಕ್ಕೂ ಅದರಲ್ಲಿ ಕಂಡುಬರುವುದಿಲ್ಲ. ಎಲ್ಲ ಸಂದರ್ಭಗಳಲ್ಲೂ ಧ್ಯಾಸವನ್ನು ಭೂಮಿಯ ಜೊತೆಯಲ್ಲೇ ಪ್ರಾರ್ಥಿಸಲಾಗಿದೆ. ಮೋಕ್ಷ-ತ್ಯಾಗಗಳು ಋಗ್ವೇದದಲ್ಲಿ ಕಾಣುವುದಿಲ್ಲ. ಹಾಗೆಯೇ ತೀರಿಕೊಂಡ ಹಿರಿಯರನ್ನು ಕುರಿತ ಒಂದು ಶ್ಲೋಕದಲ್ಲಿ ಪುನರ್‌ಜನ್ಮಕ್ಕೆ ಸಂಬಂಧಿಸಿರಬಹುದೆಂದು ಅರ್ಥೈಸಲು ಸಾಧ್ಯವಿರುವ ಸಂದರ್ಭವನ್ನು ಬಿಟ್ಟರೆ ಋಗ್ವೇದದಲ್ಲಿ ಬೇರೆಲ್ಲೂ ಪುನರ್ಜನ್ಮ ಸಿದ್ಧಾಂತವು ಕಾಣುವುದಿಲ್ಲ. 'ಅಲ್ಲಿಗೆ ಹೋಗಿ ಕಳಂಕರಹಿತನಾಗಿ ವಾಸಸ್ಥಾನಕ್ಕೆ ಮರಳಿ ಬಾ' ಎನ್ನುವ ಮಾತು ಈ ಶ್ಲೋಕದಲ್ಲಿ ಕಂಡುಬರುತ್ತದೆ.

> **ವೈದಿಕ ಆರ್ಯರು ಈಶಾನ್ಯ ದಿಕ್ಕಿನಿಂದ ತಂಡತಂಡವಾಗಿ ಭಾರತಕ್ಕೆ ಬಂದಾಗ ಅಲ್ಲಿ ತಲೆ ಎತ್ತಿ ನಿಂತಿದ್ದ ಹರಪ್ಪಾ ನಾಗರಿಕತೆ ಅವರನ್ನು ಗಾಬರಿಗೊಳಿಸಿರಬೇಕು.**
>
> **ಪಂಜಾಬಿನ ಫಲವತ್ತಾದ ನೆಲದಲ್ಲಿ ತಲೆ ಎತ್ತಿ ನಿಂತಿದ್ದ ನಗರಗಳನ್ನು ಅವರು ನಾಶಪಡಿಸಿದರು. ಸಿಂಡ್ ಮತ್ತು ಅದರ ಹಲವಾರು ಉಪನದಿಗಳಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟುಗಳನ್ನು ನಿರ್ನಾಮ ಮಾಡಿದರು.**

ಋಗ್ವೇದದ ಒಂದೆರಡು ಸಂದರ್ಭಗಳಲ್ಲಿ ಸ್ವರ್ಗದ ಪ್ರಸ್ತಾಪ ಬರುತ್ತದೆಯಾದರೂ ಎಲ್ಲಿಯೂ ನರಕದ ವಿಷಯ ಕಾಣುವುದಿಲ್ಲ. (21) ಈ ವಿಷಯದಲ್ಲಿ ಸಿ. ಕುನ್‌ಹನ್ ರಾಜಾ ಇನ್ನೂ ಹೆಚ್ಚು ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ : "ವೇದಗಳಲ್ಲಿ ಕಂಡುಬರುವ ವಿಧಿಕ್ರಿಯೆಗಳು ಪರಲೋಕದಲ್ಲಿ ಪಡೆಯಬಹುದಾದ ಸುಖ-ಸಂತೋಷಗಳಿಗಾಗಿ ಮಾಡುವುದಲ್ಲ. ಇಹದಲ್ಲಿನ ಸಂತುಷ್ಟಿಗಾಗಿಯೇ ಮಾಡುವಂತಹವು. ವೇದಗಳಲ್ಲಿ ಆತ್ಮ ಮತ್ತು ವಸ್ತುಗಳನ್ನು ಬೇರ್ಪಡಿಸುವ ಕ್ರಿಯೆ ಕಂಡುಬರುವುದಿಲ್ಲ. ಇದರಲ್ಲಿನ ಮನುಷ್ಯ, ಅವನ ಜೀವನ ಮತ್ತು ಸುಖ ಸಂತೋಷಗಳೇ ಋಗ್ವೇದದ ಪ್ರಮುಖ ವಿಷಯಗಳು. ಅಲ್ಲಿನದು ಸಮಗ್ರ ಬದುಕಿನ ಕಲ್ಪನೆ. ಅಂದಿನ ಸಾಮಾಜಿಕ ಜೀವನವು ಕೇವಲ ವಿವಾಹ ಸಂದರ್ಭಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಮಾಂಸ, ಗೋಮಾಂಸ ತಿನ್ನುವುದು, ಮಧ್ಯ ಸೇವಿಸುವುದು ಋಗ್ವೇದದಲ್ಲಿ ಕಂಡುಬರುವ ವಿವರಗಳು". ಋಗ್ವೇದದಲ್ಲಿ ಕಾಣುವ ಸಂಸ್ಕೃತಿ ಮತ್ತು ಜೀವನ ವಿಚಾರಗಳನ್ನು ಕ್ರೋಢೀಕರಿಸಿ ಹೇಳುವ ಪ್ರಯತ್ನದಲ್ಲಿ ಕುನ್‌ಹನ್‌ರಾಜಾ ಹೇಳುವುದು ಹೀಗಿದೆ: "ನನ್ನನ್ನು ಯಾರಾದರೂ ವೈದಿಕ ಸಂಸ್ಕೃತಿಯ ತಿರುಳು ಏನು? ಎಂದು ಕೇಳಿದರೆ, ನಾನು ಉತ್ತರವಾಗಿ 'ಸುಂದರ ಪ್ರಪಂಚದಲ್ಲಿನ ಸಂತೋಷದ ಬದುಕು' ಎಂದು ಹೇಳಬಲ್ಲೆ". (22)

ಅವರ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ನೋಡಿದರೆ, ವೈದಿಕ ಆರ್ಯರ ತಾತ್ವಿಕ ದೃಷ್ಟಿಕೋನವು ಇದಕ್ಕಿಂತ ಬೇರೆಯಾಗಿರುವುದು ಸಾಧ್ಯವಿರಲಿಲ್ಲ. ಬಹುಶಃ ತಂಡ ತಂಡಗಳಲ್ಲಿ ಈಶಾನ್ಯದಿಕ್ಕಿನ ಭೂಮಾರ್ಗವಾಗಿ ಭಾರತವನ್ನು ಪ್ರವೇಶಿಸಿದ ಆರ್ಯರು ಪ್ರಸಿದ್ಧ ಮಾನವ ಶಾಸ್ತ್ರಜ್ಞ ಇ. ಟಿ. ಟೇಲರ್‌ನ ಮಾತುಗಳಲ್ಲಿ "ಅನಾಗರೀಕ ಜನಾಂಗ ಭಾರತವನ್ನು ಪ್ರವೇಶಿಸುವ ಮೊದಲು ಅವರು ನಗರವನ್ನು ಕಂಡವರಲ್ಲ. ಒಂದು ರೀತಿಯಲ್ಲಿ ಅರೆ-ಅರಣ್ಯವಾಸಿಗಳಾಗಿ ತಮ್ಮ ದನಕರುಗಳೊಂದಿಗೆ ಗುಡ್ಡಗಾಡುಗಳನ್ನು ಸುತ್ತುತ್ತಿದ್ದರು. ಹರಪ್ಪಾದ ನಗರ ನಾಗರೀಕತೆಯು ಅವರನ್ನು ಗಾಬರಿಗೊಳಿಸಲಿಕ್ಕೆ ಸಾಕು. ಪಂಜಾಬಿನ ಫಲವತ್ತಾದ ನೆಲದಲ್ಲಿ ತಲೆಯೆತ್ತಿ ನಿಂತಿದ್ದ ನಗರಗಳು ಅವರಿಗೆ ಯಾವುದೋ ದುಷ್ಟಶಕ್ತಿಯ ಸೃಷ್ಟಿಯಾಗಿ ಕಂಡಿರಬೇಕು.

ಆದ್ದರಿಂದಲೇ ಈ ನಗರಗಳನ್ನು ಅವರು ನಾಶಪಡಿಸಿದರು. ಅವರದೇ ಬಳಕೆಯ ಮಾತಿನಲ್ಲಿ ಹೇಳುವುದಾದರೆ ಅವು 'ಪುರ'ಗಳು. 'ಪುರಂಧರ' (ಪುರಗಳನ್ನು ನಾಶಪಡಿಸಿದವನು) ಎನ್ನುವುದು ಅವರ ಅಧಿದೇವತೆಯೂ, ಸಮರ ದೇವತೆಯೂ ಆದ ಇಂದ್ರನಿಗೆ ಅವರು ಕೊಟ್ಟ ಬಿರುದು. ಸಿಂಧ್ ಮತ್ತು ಅದರ-ಹಲವಾರು ಉಪನದಿಗಳಿಗೆ ಅಡ್ಡಲಾಗಿ ಕಟ್ಟಿದ ಅಣೆಕಟ್ಟುಗಳು ಹರಿವನ್ನು ತಡೆಯುವ ಸರ್ಪಾಕಾರದ ದೈತ್ಯರಂತೆ ಅವರಿಗೆ ಕಂಡುಬಂದಿದ್ದರೆ ಆಶ್ಚರ್ಯವೆನಿಸುವುದಿಲ್ಲ. ಆದ್ದರಿಂದ ಅವರು ಈ ಅಣೆಕಟ್ಟುಗಳನ್ನು ನಿರ್ನಾಮ ಮಾಡಿದರು. ಸರ್ಪದೈತ್ಯನನ್ನು ಮರ್ದಿಸಿದ ಇಂದ್ರನನ್ನು ವೃತ್ರಾಹನ ಎಂದು ಜಯಘೋಷ ಹಾಕಿ ಕರೆದರು.

ದೈಹಿಕವಾಗಿ ಬಲಶಾಲಿಗಳಾದ ಅವರಿಗೆ ಇದ್ದ ಇನ್ನಿತರ ಅನುಕೂಲತೆಗಳೇ ಅವರನ್ನು ಅಜೇಯರನ್ನಾಗಿಸಿದ್ದವು. ಕದನದಲ್ಲಿ ಅವರು ಕುದುರೆ ಹೂಡಿದ ರಥಗಳನ್ನೂ, ಬಿಲ್ಲು-ಬಾಣಗಳನ್ನೂ ಬಳಸಿದರು. ಹರಪ್ಪಾ ಜನತೆಗೆ ಅವರು ಬಹುಶಃ ಹಿಟ್ಲರನ ಪಾನ್‌ಜೇ * ತುಕಡಿಗಳಂತೆ ಕಂಡಿರಬೇಕು. "ವಜ್ರಾಯುಧ" ಎಂಬ ಹೊಸದೊಂದು ಆಯುಧವು ಅವರಲ್ಲಿತ್ತು. ಯುದ್ಧದಲ್ಲಿ ಬಳಸಲಾಗುವ ಹಿಡಿಯನ್ನು ಹೊಂದಿದ ಒಂದು ರೀತಿಯ ಕೊಡಲಿಯೇ ಈ ವಜ್ರಾಯುಧ ಎಂಬುದು ಕೆಲವು ಸಂಶೋಧಕರ ಅಭಿಪ್ರಾಯ.

---

* **ಅಗ್ನಿಹೋತ್ರಂ ತ್ರಯೋ ವೇದಾಸ್ತ್ರದಂಡಂ ಭಸ್ಮಗುಂಡನಂ**
ಬುದ್ಧಿಪೌರುಷ ಹೀನಾನಾಂ ಜೀವಿಕೇತಿ ಬೃಹಸ್ಪತಿ॥
(ಸರ್ವದರ್ಶನ ಸಂಗ್ರಹ–ಚಾರ್ವಾಕದರ್ಶನ)—(ಅನು.)

* **ನಾಜಿ ಟ್ಯಾಂಕ್ ಯೋಧರು**

ಇಂತಹ ಅಜೇಯ ಪೌರುಷ ಅವರಲ್ಲಿದ್ದರೂ, ಸ್ಥಳೀಯರನ್ನು ಸಂಹರಿಸಿ ಅವರ ವಾಸಸ್ಥಳಗಳನ್ನು ಆಕ್ರಮಿಸಬೇಕು ಎನ್ನುವ ಉದ್ದೇಶವುಳ್ಳ ಇವರ ಸಂಖ್ಯೆಯು ಕಡಿಮೆ ಇದ್ದುದು ಒಂದು ರೀತಿಯಲ್ಲಿ ಮಿತಿಯೂ ಆಗಿತ್ತು. ಈ ಅನಾನುಕೂಲತೆಯ ಕಾರಣದಿಂದಾಗಿ ಅವರು ಅ) ಯುದ್ಧದಲ್ಲಿ ತೀರಾ ನಿರ್ದಯರಾದರು. ಆ) ರಕ್ಷಣೆಗಾಗಿ ತಮ್ಮ ದೇವರ ಪ್ರಾರ್ಥನೆಗಳಲ್ಲಿ ತೊಡಗಿದರು. ಅಮಾಯಕ ಸ್ತ್ರೀಯರನ್ನೂ, ಮಕ್ಕಳನ್ನೂ ಅವರು ಕೊಂದುಹಾಕಿದ್ದನ್ನು ಗಮನಿಸಿದರೆ ಅವರ ನಿರ್ದಯತೆ ಎಂತಹ ಮಟ್ಟದ್ದೆಂದು ಅರಿವಾಗುತ್ತದೆ.

ಶತ್ರು ಪಂಗಡದ ಸ್ತ್ರೀಯ ಗರ್ಭವನ್ನು ಪ್ರವೇಶಿಸಿ, ಗರ್ಭಕೋಶವನ್ನು ನಾಶಮಾಡಿದ್ದಕ್ಕಾಗಿ ಇಂದ್ರನಿಗೆ ಕೃತಜ್ಞತೆ ಸಲ್ಲಿಸುವ ಒಂದು ಸಂದರ್ಭವಂತೂ ಸ್ಪಷ್ಟವಾಗಿ ಕಂಡುಬರುತ್ತದೆ. ಮೂಲನಿವಾಸಿಗಳ ನಡುವೆ ತಮ್ಮ ಸ್ಥಿತಿಯು ವಿಶಾಲ ಸಮುದ್ರದಲ್ಲಿನ ನಡುಗಡ್ಡೆಗಳಂತೆ ಎಂದು ಅವರು ಭಾವಿಸಿದರು. ಪರಿಚಿತವಲ್ಲದ ಈ ಪ್ರದೇಶದ ಮೂಲನಿವಾಸಿಗಳಿಂದ ತಮ್ಮನ್ನು ರಕ್ಷಿಸಬೇಕೆಂದು ಹಗಲಿರುಳೂ ತಮಗೆ ಗೊತ್ತಿದ್ದ, ಗೊತ್ತಿಲ್ಲದ ದೇವರುಗಳಿಗೆ ಪ್ರಾರ್ಥನೆ ಸಲ್ಲಿಸುತ್ತಲೇ ಇದ್ದರು. ಆದ್ದರಿಂದಲೇ ಋಗ್ವೇದದಲ್ಲಿ ಕಂಡುಬರುವ ಬಹುಮಟ್ಟಿನ ಋಕ್ಕುಗಳು ಅವರ ಸಮರ ಗೀತೆಗಳೂ, ಪ್ರಾರ್ಥನೆಗಳೂ ಆಗಿವೆ.

ಯಾವುದೇ ಪೌರುಷಪ್ರಧಾನ ಬುಡಕಟ್ಟು ಜನಾಂಗಗಳಲ್ಲಿ ಕಂಡುಬರುವಂತೆ ಭಾವನೆಗಳು ಹಾಡಾಗಿ ಹರಿಯುವ ಕಾವ್ಯಾತ್ಮಕತೆ ಇವುಗಳಲ್ಲೂ ಕಾಣುತ್ತದೆ. ಋಗ್ವೇದದ ಕೆಲವು ಭಾಗಗಳಂತೂ ಶ್ರೇಷ್ಠ ಕಾವ್ಯವೇ ಆಗಿದೆ. ನಿಜವಾದ ಕಾವ್ಯವು ಅತ್ಯಂತ ಆಶ್ಚರ್ಯಕರವಾದ, ಕಲ್ಪನಾ ಲೋಕದ ಸಂಚಾರದ ಜೊತೆಗೆ ನಮ್ಮ ಸಾಮಾನ್ಯ ಅರಿವಿಗೆ ಎಟುಕದ ಒಳನೋಟಗಳನ್ನು ಮತ್ತು ಸಾರ್ವಕಾಲಿಕ ಸತ್ಯಗಳ ಸೂಕ್ಷ್ಮ ಸೂಚನೆಗಳನ್ನು ಒಳಗೊಂಡಿರುತ್ತದೆ. ಈ ಲಕ್ಷಣಗಳು ಋಗ್ವೇದಕ್ಕೆ ಒಂದು ವಿಶಿಷ್ಟತೆಯನ್ನು ಕೊಡುವುದಾದರೂ ಈ ಕಾರಣಗಳಿಂದಾಗಿ ಅದು ಸರ್ವಾಂತರ್ಯಾಮಿಯಾದ ಭಗವಾನ್ ಉವಾಚ ಎನ್ನುವುದು ವೈಚಾರಿಕತೆಗೆ ಬೆನ್ನು ತಿರುಗಿಸುವಂತದ್ದು.

ಋಗ್ವೇದದಲ್ಲಿ ಕಂಡುಬರುವ ಅಪ್ಪಟ ಚಿನ್ನದ ಜೊತೆಗೇ, ಅದಕ್ಕಿಂತ ಹೆಚ್ಚಾಗಿ ಕಶ್ಮಲವೂ ಸೇರಿದೆ. ನಾನು "ಅಪ್ಪಟ ಚಿನ್ನ" ಎಂದು ಹೇಳಿದಾಗ ಋಗ್ವೇದದ ಕಾವ್ಯ ನನ್ನ ಮನಸ್ಸಿನಲ್ಲಿದೆಯೇ ಹೊರತು ಅದು ನಿರೂಪಿಸುವ ತತ್ವ ಪ್ರಣಾಳಿಕೆಯಲ್ಲಲ್ಲ.

ಋಗ್ವೇದದಲ್ಲಿ ಕಂಡುಬರುವ ಅಪ್ಪಟಚಿನ್ನದ ಜೊತೆಗೇ, ಅದಕ್ಕಿಂತ ಹೆಚ್ಚಾಗಿ ಕಶ್ಮಲವೂ ಸೇರಿದೆ. ನಾನು "ಅಪ್ಪಟ ಚಿನ್ನ" ಎಂದು ಹೇಳಿದಾಗ ಋಗ್ವೇದದ ಕಾವ್ಯ ನನ್ನ ಮನಸ್ಸಿನಲ್ಲಿದೆಯೇ ಹೊರತು ಅದು ನಿರೂಪಿಸುವ ತತ್ವ ಪ್ರಣಾಳಿಕೆಯಲ್ಲಲ್ಲ.

ಋಗ್ವೇದದ ಸಂಕಲನಕಾರರನ್ನು ಸೂಕ್ಷ್ಮ ಚಿಂತಕರೆಂದಾಗಲೀ, ಸಮರ್ಥ ತತ್ವಜ್ಞಾನಿಗಳೆಂದಾಗಲೀ ಕರೆಯುವುದು ಸಾಧ್ಯವಿಲ್ಲ. ಒಂದು ಋಕ್ಕಿನ ಕರ್ತೃವಂತೂ ಕಪ್ಪು ಅಥವಾ ಕೆಂದು ಬಣ್ಣದ ಹಸುವು ಬಿಳಿಯ ಹಾಲನ್ನು ಕೊಡುವುದು ಹೇಗೆ ಸಾಧ್ಯ ಎನ್ನುವಷ್ಟರ ಆಶ್ಚರ್ಯವನ್ನು ವ್ಯಕ್ತಪಡಿಸುವಷ್ಟು ಮುಗ್ಧನಾಗಿ ಕಾಣುತ್ತಾನೆ.

ಸೃಷ್ಟಿ ಮತ್ತು ಸೃಷ್ಟಿಕರ್ತನನ್ನು ಕುರಿತ ಅವರ ವಿಚಾರ ಮತ್ತು ಚಿಂತನೆಯಲ್ಲಿ ನಿಖರತೆ ಇತ್ತು ಎನ್ನುವುದು ಸಾಧ್ಯವಿಲ್ಲ. ಒಂದು ಹಂತದಲ್ಲಿ ವರುಣ, ಇಂದ್ರ, ಅಗ್ನಿ ಇವರುಗಳು ಒಂದುಗೂಡಿ ವಿಶ್ವವನ್ನು ಸೃಷ್ಟಿಸಿದರು ಎನ್ನಲಾಗಿದೆ. ಬಂಗಾರದ ಗರ್ಭವುಳ್ಳ ದೇವತೆಯಾದ ಹಿರಣ್ಯಗರ್ಭವೇ ಸೃಷ್ಟಿಕರ್ತ ಎನ್ನುವ ಮಾತು ನಂತರದ ಹಂತದಲ್ಲಿ ಕಂಡುಬರುತ್ತದೆ. ಮುಂದಿನ ಹಂತದಲ್ಲಿ ಈ ಗೌರವಕ್ಕೆ ಪಾತ್ರರಾಗಲು ವಿಶ್ವಕರ್ಮ ಮತ್ತು ಪ್ರಜಾಪತಿ ಕಿತ್ತಾಡುವುದನ್ನು ನಾವು ನೋಡುತ್ತೇವೆ. ಸೃಷ್ಟಿಯು ಹೇಗಾಯಿತು ಎಂಬುದರ ಬಗ್ಗೆ ಯಾರೊಬ್ಬರಲ್ಲೂ ಒಮ್ಮತ ಕಂಡುಬರುವುದಿಲ್ಲ. ಒಂದು ಅಭಿಪ್ರಾಯದಂತೆ, ಬಡಗಿಯು ಕಟ್ಟಿಗೆಯಿಂದ ಮನೆಯನ್ನು ನಿರ್ಮಿಸುವ ರೀತಿಯಲ್ಲಿ ನಿರ್ಮಿಸಲಾಯಿತು. ಆದರೆ ಈ ಕಟ್ಟಿಗೆಯನ್ನು ಒದಗಿಸಿದ ವೃಕ್ಷ ಯಾವುದು ? ಬ್ರಹ್ಮನೇ ಆ ವೃಕ್ಷ.

ಮತ್ತೊಂದುಅಭಿಪ್ರಾಯದಲ್ಲಿ ವಿಶ್ವವ್ಯಾಪ್ತಿಯಾದ ಸಮುದ್ರದಿಂದ ಉದ್ಭವಿಸಿದ ಹಿರಣ್ಯಗರ್ಭನು ಆಕಾರರಹಿತ ಸ್ಥಿತಿಯಿಂದ ಈ ವಿಶ್ವವನ್ನು ಸೃಷ್ಟಿಸಿದನು. ಇನ್ನೂ ಒಂದು ಅಭಿಪ್ರಾಯದಂತೆ, ಪುರುಷ ಮತ್ತು ಪ್ರಕೃತಿಯ ಸಂಸರ್ಗದ ಫಲವೇ ಸೃಷ್ಟಿ. ಇನ್ನೂ ಒಂದು ಕಲ್ಪನೆಯಂತೆ ಎಲ್ಲಕ್ಕೂ ಮೊದಲು ಹುಟ್ಟಿದ ವಿಶ್ವಕರ್ಮನು ದೇವಶಿಲ್ಪಿಯಾಗಿ ಜಗತ್ತನ್ನು ಸೃಷ್ಟಿಸಿದ.

ಕೊನೆಯದಾಗಿ ಒಂದು ಶ್ಲೋಕದಲ್ಲಿ ಗಮನಿಸಬೇಕಾದ ಒಂದು ವಾಕ್ಯವಿದೆ. "ಆಗ ಅಲ್ಲಿ ಯಾವುದೇ ಸ್ಥಿತಿಯಾಗಲಿ ಸ್ಥಿತಿ ಹೀನತೆಯಾಗಲಿ ಇರಲೇ ಇಲ್ಲ". ವಿಚಾರ ಪ್ರವೃತ್ತಿಯ ಮನಸ್ಸಿಗೆ ಈ ಹೇಳಿಕೆಗಳು ಅರ್ಥಹೀನ ಎಂದು ಬೇರೆ ಹೇಳಬೇಕಾಗಿಲ್ಲ. ಹೀಗಿದ್ದರೂ ಅದು ರಾಧಾಕೃಷ್ಣನ್ ಅವರಿಗೆ "ಸೃಷ್ಟಿಯ ಬಗೆಗಿನ ಉನ್ನತ ಮಟ್ಟದ ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ". ಯಾವುದಕ್ಕಿಂತ ಉನ್ನತವಾದುದ್ದು? ಯೂಡೋಕ್ಸಸ್ ಮತ್ತು ಟಾಲೆಮಿ ಅಥವಾ ಆರ್ಯಭಟ ಮತ್ತು ವರಹಾಮಿಹಿರ ಅಥವಾ ಕೋಪರ್ನಿಕಸ್ ಮತ್ತು ಕೆಪ್ಲರ್ ಇವರುಗಳ ಸಿದ್ಧಾಂತಗಳ ಮುಂದು ರೂಪವಂತೂ ಇದಲ್ಲ ಅಲ್ಲವೇ ?

(ಮುಂದುವರೆಯುವುದು)

ಟಿಪ್ಪಣಿ

12. ತೀರ್ಥ, ಸ್ವಾಮಿ ಧರ್ಮ ಅವರಿಂದ ಉದಹೃತ : ದಿ ಮಿನೇಸ್ ಆಫ್ ಹಿಂದೂ ಇಂಪೀರಿಯಲಿಸಮ್. ಲಾಹೋರ್, 1946. ಪು 307
13. ಹಾವೆಲ್. ಇ. ಬಿ. : ದಿ ಹಿಸ್ಟರಿ ಆಫ್ ಆರ್ಯನ್ ರೂಲ್ ಇನ್ ಇಂಡಿಯ, ಲಂಡನ್, ಪು 119-120.
14. ಅದೇ, ಪು 149
15. ತೀರ್ಥ, 1946, ಪು 115
16. ಲಾಂಗರ್ಸ್ಟ್, ಎ. ಎಚ್. : ದಿ ಬುದ್ದಿಸ್ಟ್ ಆ್ಯಂಟಿಕ್ವಿಟೀಸ್ ಆಫ್ ನಾಗಾರ್ಜುನಕೊಂಡ, ದೆಹಲಿ, 1938, ಪು. 6.
17. ಲಾ, ಬಿ. ಸಿ. : ಹಿಸ್ಟಾರಿಕಲ್ ಗ್ಲೀನಿಂಗ್ಸ್, ಕಲ್ಕತ್ತ 1922 ಪು 9
18. ರೀಪ, 1964, ಪು, 35.
19. ರಾಯ್ ಎಂ. ಎನ್. : ಮೆಟೀರಿಯಲಿಸಂ : ಎನ್ ಔಟ್‌ಲೈನ್ ಆಫ್ ದಿ ಹಿಸ್ಟರಿ ಆಫ್ ಸೈಂಟಿಫಿಕ್ ಥಾಟ್, ಕಲ್ಕತ್ತ 1940, ಪು 94
20. ಡಾ. ಶಾಸ್ತ್ರಿ. ಡಿ. : ಎ ಷಾರ್ಟ್ ಹಿಸ್ಟರಿ ಆಫ್ ಇಂಡಿಯನ್ ಮೆಟೀರಿಯಲಿಸಂ ಎಂಡ್ ಹೆಡೋನಿಸಂ, ಕಲ್ಕತ್ತ 1957 ಪು 51.
21. ಮೂರ್ತಿ, ಕೆ. ಎಸ್. : ದಿ ಇಂಡಿಯನ್ ಸ್ಪಿರಿಟ್, ವಾಲ್ಟೇರ್ 1965 ಪು 8-9
22. ರಾಜು, ಸಿ, ಕುನ್‌ಹನ್ : ದಿ ಕ್ವಿಂಟ್ ಎಸೆನ್ಸ್ ಆಫ್ ದಿ ರಿಗ್‌ವೇದ, ಬಾಂಬೆ ಪು 10-13.

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಳ್ಳಿ, ಬೆಂಗಳೂರು-40
ಮುದ್ರಣ : ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-40